
# ಜ್ಞಾನಶಕ್ತಿ

## ಮಾಸ ಪತ್ರಿಕೆ

# JNANASHAKTHI




**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಡಿಸೆಂಬರ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 12 ಪ್ರಕಟಣೆ : 09-12-2022


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಶ್ರೀ ಕೆ. ಆರ್. ಉಪಾಧ್ಯಾಯರು ತಮ್ಮ ಅಣ್ಣ ಕಟೀಲು ಸದಾಶಿವ ಉಪಾಧ್ಯಾಯ ಮತ್ತು ಅತ್ತಿಗೆ ದಿ। ಪಿ. ವೇದಾವತಿ ಸದಾಶಿವ ಉಪಾಧ್ಯಾಯ ಇವರ ಸ್ಮರಣಾರ್ಥ ರೂ. **1,00,000/-** (ಒಂದು ಲಕ್ಷ) ಮತ್ತು ಬ್ರಹ್ಮಶ್ರೀ ದಿ। ಕಟೀಲು ರಾಮಪ್ಪ ಉಪಾಧ್ಯಾಯ ಮತ್ತು ಶ್ರೀಮತಿ ಯಮುನಮ್ಮ ಇವರ ಸ್ಮರಣಾರ್ಥ ರೂ. **35,000/-** ಹಾಗೂ ದಿ। ನಾರಾಯಣ ಉಪಾಧ್ಯಾಯ ಮತ್ತು ದಿ। ಕಾವೇರಿಯಮ್ಮ ಸ್ಮರಣಾರ್ಥ ರೂ. **35,000/-** ನೀಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಲ ವಿದ್ಯಾರ್ಥಿ ವೇತನ ನಿಧಿ ಸ್ಥಾಪಿಸಿದ್ದಾರೆ. ಇನ್ನು ಮುಂದೆ ಇನ್ನಷ್ಟು ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಕೀರ್ತಿಶೇಷ ಗಾಯತ್ರಿ ಪ್ರಭಾಕರ್ ರಾವ್ ಇವರ ಸ್ಮರಣಾರ್ಥ ಅವರ ಪುತ್ರಿ ಮಂಗಳೂರು ನಿವಾಸಿ ಶ್ರೀಮತಿ ಶಾಲಿನಿ ಮತ್ತು ಅಳಿಯ ಶ್ರೀ ವ್ಯಾಸರಾಜ್ ರಾವ್ ಅವರು ಜೊತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತಕ್ಕೆ ಒಳಪಟ್ಟ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಎರಡು ಮರದ ಮಂಚ, ಮೂರು ಮರದ ಕುರ್ಚಿಗಳು, ಎರಡು ಕೈಗಳುಳ್ಳ ಪ್ಲಾಸ್ಟಿಕ್ ಕುರ್ಚಿಗಳು, ಒಂದು ಗಾರ್ಡನ್ ಕುರ್ಚಿ, ಒಂದು ವಾಕರ್, ಒಂದು ವಾಕಿಂಗ್‌ಸ್ಟಿಕ್, ಎರಡು ಫೂಟ್‌ರೆಸ್ಟ್, ಒಂದು ಏರ್‌ಕೂಲರ್, ಮೂರು ಹತ್ತಿಯ ಹಾಸಿಗೆ, ಎರಡು ದಿಂಬುಗಳು ಮುಂತಾದ ಉಪಯುಕ್ತವಾದ ಸಲಕರಣೆಗಳನ್ನು ದಾನವಾಗಿ ನೀಡಿದ್ದಾರೆ. ಮುಂದೆ ಇನ್ನು ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಉಡುಪಿ ನಿವಾಸಿ ಶ್ರೀಮತಿ ಶಂಕರಿ ಎಂ. ರಾವ್ ತಮ್ಮ ಪತಿ ದಿ। ಬೆಳ್ಳಪಾಡಿ ಮೋಹನ ರಾವ್ ಇವರ **75**ನೇ ಹುಟ್ಟುಹಬ್ಬದ ಮತ್ತು ತಮ್ಮ **65**ನೇ ಹುಟ್ಟುಹಬ್ಬದ ಸ್ಮರಣಾರ್ಥ ತಮ್ಮ ಸುಪುತ್ರ ಅಕ್ಷಯ್ ಜತೆಗೂಡಿ ರೂ. **25,000/-**ಗಳನ್ನು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ದೇಣಿಗೆ ನೀಡಿದ್ದಾರೆ. ಇನ್ನು ಮುಂದೆ ಇನ್ನಷ್ಟು ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಕೊಯಿಲ ನಿವಾಸಿ ವಕೀಲರಾದ ಶ್ರೀ ರವಿಕಿರಣ್ ಮತ್ತು ಶ್ರೀ ಹರಿಕಿರಣ್‌ರವರು ತಮ್ಮ ತಂದೆ ಕೊಯಿಲ ಶ್ರೀಧರ ರಾವ್ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂಪಾಯ **23,000-00** ಮೌಲ್ಯದ ಹಾಸ್ಪಿಟಲ್ ಮಂಚವನ್ನು ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.) - ಮನವಿ

'ಶಿವಸದನ' ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ **36**ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.

ಶ್ರೀ ಕರುಣ್ ರಾವ್ ಬೆಳ್ಳೆ ✆ : 7337634359 ● ಶ್ರೀ ಪಿ. ಶ್ರೀಕಾಂತ್ ರಾವ್ ✆ : 7795116598



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

### ಶ್ರೀ ಸಭಾದ ವಾರ್ಷಿಕೋತ್ಸವವು

ತಾರೀಕು **25-12-2022**ನೇ ಆದಿತ್ಯವಾರದಂದು
ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಹೆಚ್ಚಿನ ಮಾಹಿತಿಗಾಗಿ**

| | |
|---|---|
| ಶ್ರೀ ಅನಿಲ್ ನೆಲ್ಲಿಕುಂಜ | ✆ : 9448815172 |
| ಶ್ರೀ ಸುರೇಶ್ ರಾವ್ ಕಡಬ | ✆ : 9972760673 |
| ಶ್ರೀಮತಿ ಕುಸುಮಾ ನವೀನ್ ಕುಮಾರ್ | ✆ : 9480760904 |
| ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ | ✆ : 9739155359 |

### ಕಾರ್ಯಕ್ರಮಗಳು

| | |
|---|---|
| ಬೆಳಗ್ಗೆ 8-00ರಿಂದ | ಉಪಾಹಾರ |
| ಪೂರ್ವಾಹ್ನ 8-30ರಿಂದ 9-30 | ಶ್ರೀ ಶಾರದಾಂಬಾ ಭಜನಾ ಮಂಡಳಿ ಇವರಿಂದ **ಭಜನೆ** |
| ಪೂರ್ವಾಹ್ನ 9-30ರಿಂದ 10-00 | ಹೂಜೋಡಣಾ ಸ್ಪರ್ಧೆ (ಮುಕ್ತ ವಿಭಾಗ) |
| ಪೂರ್ವಾಹ್ನ 10-00ರಿಂದ 11-00 | ಅಡುಗೆ ಸ್ಪರ್ಧೆ (ಮುಕ್ತ ವಿಭಾಗ) (ಒಬ್ಬರಿಗೆ ಒಂದು ಸಿಹಿ, ಒಂದು ಖಾರ ವ್ಯಂಜನ) ಮತ್ತು ರಂಗೋಲಿ ಸ್ಪರ್ಧೆ (ಮುಕ್ತ ವಿಭಾಗ) |
| ಪೂರ್ವಾಹ್ನ 11-00ರಿಂದ | **ಮಹಾಸಭೆ** |
| ಮಧ್ಯಾಹ್ನ 12-30ರಿಂದ | ಭೋಜನ |
| ಅಪರಾಹ್ನ 2-00ರಿಂದ 2-30 | ಕೈತೋಟ ಕ್ರಾಂತಿ ಉಚಿತ ಮಾರ್ಗದರ್ಶನ ಸಾವಯವ ಕೃಷಿಕ ಗ್ರಾಹಕ ಬಳಗ, ಮಂಗಳೂರು |
| ಅಪರಾಹ್ನ 2-30ರಿಂದ | **ಸಾಂಸ್ಕೃತಿಕ ಕಾರ್ಯಕ್ರಮಗಳು** |
| ಅಪರಾಹ್ನ 4-30ರಿಂದ | ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ |

- ಮಹಾಕಾರ್ಯಗಳು ಮಹಾತ್ಯಾಗದಿಂದ ಮಾತ್ರ ಸಾಧ್ಯ. – ಸ್ವಾಮಿ ವಿವೇಕಾನಂದ
- ಬದುಕಿನಲ್ಲಿ ಕಷ್ಟ ಬರಲೇಬೇಕು. ಸಂಕಟಗಳು ಇದ್ದರೆ ಯಶಸ್ಸಿಗೆ, ಸಾಧನೆಗೆ ಸಂಭ್ರಮ. – ಎ.ಪಿ.ಜೆ. ಅಬ್ದುಲ್ ಕಲಾಂ

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು :
ಪಿ. ಶ್ರೀಕಾಂತ ರಾವ್ ಮೊಬೈಲ್ : 9343361618

ಸಂಪಾದಕ ಮಂಡಳಿ :
• ನಾಗರಾಜ್ ವರ್ಕಾಡಿ
• ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್
• ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
• ಕರುಣ್ ರಾವ್ ಬೆಳ್ಳೆ
• ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
• ಚೇತನ್ ಶರ್ಮ
• ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618
e-mail : jnanashakthisss@gmail.com



*Manish Rao U.*
Tel : (O) 2223301
✆ : 9448726499 / 8884284939

NAVA COMPUTERS

DEALERS IN
C.C. Camera, Theft Alarm
Remote Locks
Computers Hardware & Peripherals
Computer Sales & Services

1st Floor, Bharath Building
P. M. Rao Road, Hampankatta
MANGALURU - 575 001



*Sri Hari Adyapady*
Proprietor
✆: 0824-2251597 (R) 2252119 (O)
9448344612 / 9964072489

SHIVA ELECTRICALS

2nd Floor, Ozanam Complex
Church Building, Main Road
BAJPE - MANGALORE

We undertake all types of
Electrical,
Plumbing &
Sanitary Works




# ಧರ್ಮಮಿತ್ರ

• ಶ್ರೀ ಎಂ. ಆರ್. ವೆಂಕಟರಾಮಯ್ಯ • ಕೃಪೆ : 'ಶ್ರೀ ಶಂಕರ ಕೃಪಾ'

ಮಾನವ ಸಂಘಜೀವಿ. ಅವನು ಒಂಟಿಯಾಗಿರಲಾರ. ಅನೇಕ ವೇಳೆ, ತಮ್ಮ ತಂದೆ ತಾಯಿ, ಸೋದರ ಕುಟುಂಬದ ಸದಸ್ಯರೊಡನೆ ಹೇಳಿ, ಹಂಚಿಕೊಳ್ಳಲಾಗದ ಕೆಲವು ಭಾವನೆಗಳನ್ನು ತನ್ನ ಆಪ್ತ, ಗೆಳೆಯ, ಮಿತ್ರರೊಡನೆ ಹೇಳಿ, ಪರಿಹಾರ ಕಂಡುಕೊಂಡು ಮನಸ್ಸಿಗೆ ನೆಮ್ಮದಿ ಪಡೆಯುವ ಸಂದರ್ಭಗಳು ಹಲವುಂಟು. ಹೀಗೆ, ಮಿತ್ರ, ಸ್ನೇಹಿತ, ಗೆಳೆಯನ ಅಗತ್ಯ, ಮಹತ್ವ, ಪ್ರಾಮುಖ್ಯಗಳನ್ನು ಮತ್ತಷ್ಟು ಒತ್ತಿ ಹೇಳುವ ಅಗತ್ಯ ಇರಲಾರದು, ಆದರೆ ನಮಗೆ ಪರಿಚಿತರಾದವರೆಲ್ಲಾ ನಿಜವಾದ ಅರ್ಥದಲ್ಲಿ ಮಿತ್ರರಾಗಲು ಸಾಧ್ಯವಿಲ್ಲ. ಹಾಗಾದರೆ ನಮ್ಮ ನಿಜವಾದ ಸ್ನೇಹಿತರು ಯಾರು? ಎಂಬುದನ್ನು ದೃಢಪಡಿಸಿಕೊಳ್ಳುವ ಮೊದಲು, ನಾವು ಅವರನ್ನು ಹಲವಾರು ದೃಢಪಡಿಸಿಕೊಳ್ಳುವ ಮೊದಲು, ನಾವು ಅವರನ್ನು ಹಲವಾರು ದೃಷ್ಟಿಕೋನಗಳಿಂದ ಸೂಕ್ಷ್ಮವಾಗಿ ಪರೀಕ್ಷಿಸಿ, ಅವರ ತರ್ಕ, ರುಚಿ, ಅಭಿರುಚಿ, ಜೀವನಶೈಲಿ, ಭೌದ್ಧಿಕ, ಆರ್ಥಿಕ ಮಟ್ಟ ಇತ್ಯಾದಿಗಳು ನಮ್ಮದರೊಂದಿಗೆ ಹೊಂದಿಕೆಯಾಗುತ್ತದೆಯೇ ಎಂಬುದು ಖಾತ್ರಿಯಾದ ನಂತರ ಅವರನ್ನು ನಮ್ಮ ನಿಜವಾದ ಆಪ್ತರು ಎಂದು ಪರಿಗಣಿಸಬಹುದು. 'ಗುಣ ನೋಡಿ ಗೆಳೆತನ ಮಾಡು' ಎಂಬ ಸೂಕ್ತಿ ನೆನಪಿಡಬೇಕು. ಮಿತ್ರನಾಗಲು ಯಾರು ಅರ್ಹ? ಎಂದರೆ 'ಆಪತ್ಕಾಲೇ ತು ಸಂಪ್ರಾಪ್ತೇ ಯನ್ಮಿತ್ರಂ ಮಿತ್ರಮೇವ ತತ್' ಕಷ್ಟ ಕಾಲ ಬಂದಾಗ ಯಾರು ಸ್ನೇಹಿತನಾಗಿ ನಮ್ಮ ಜೊತೆ ಉಳಿಯುವನೋ ಅವನೇ ಮಿತ್ರ ಎಂಬ ವಿವರಣೆ ನೀಡಿದೆ ಪಂಚತಂತ್ರದ ಮಿತ್ರಸಂಪ್ರಾಪ್ತಿ. ಇವರೆಲ್ಲಾ ಲೌಕಿಕ ವ್ಯವಹಾರದೃಷ್ಟಿಯಿಂದ ಮಿತ್ರರು ಎನಿಸಿಕೊಳುತ್ತಾರೆ.

ಪಾರಮಾರ್ಥಿಕ ದೃಷ್ಟಿಯಲ್ಲಿ ನಿಜವಾದ ಮಿತ್ರ ಯಾರು? "ಏಕ ಏವ ಸುಹೃದ್ಧರ್ಮೋ ನಿಧನೇಪ್ಯನುಯಾತಿ ಯಃ। ಶರೀರೇಣ ಸಮಂ ನಾಶಂ ಸರ್ವಮನ್ಯದ್ಧಿ ಗಚ್ಛತಿ॥" ಧರ್ಮ ಒಂದೇ ನಿಜವಾದ ಮಿತ್ರ, ಅಂದರೆ ಮರಣಾನಂತರವೂ ಜೀವಾತ್ಮನನ್ನು ಜೊತೆಗೂಡಿ ಬರುವುದು ಧರ್ಮವೊಂದೇ, ಧರ್ಮವೊಂದನ್ನು ಬಿಟ್ಟು ಉಳಿದವರೆಲ್ಲರೂ ವ್ಯಕ್ತಿ ಮರಣಿಸಿದ ಕೂಡಲೇ ಅವನನ್ನು ತೊರೆದು ದೂರವಾಗಿ ಬಿಡುತ್ತಾರೆ. "ವೃಷೋ ಹಿ ಭಗವಾನ್ ಧರ್ಮಸ್ತಸ್ಯ ಯಃ ಕುರುತೇ ಹ್ಯಲಮ್" ಧರ್ಮವೇ ಇಷ್ಟಾರ್ಥಗಳನ್ನು ಅನುಗ್ರಹಿಸುವ ಭಗವಂತನ ಸ್ವರೂಪ ಎಂದಿದೆ ಮನುಸ್ಮೃತಿ (8.16,17)

ಹೀಗೆಂದಾಗ ನಮ್ಮ ಜೊತೆ ಮಿತ್ರರಿಲ್ಲದಿದ್ದರೆ ಏನಂತೆ? ನಮ್ಮ ಜೊತೆಗೆ ಪತಿ, ಪತ್ನಿ, ಪುತ್ರ, ಬಂಧು, ಸಿರಿ, ಸಂಪತ್ತು ಎಲ್ಲರೂ ಇರುವುದಿಲ್ಲವೇ? ಎನ್ನುವವರು 'ಮಾತೃ–ಪಿತೃ–ಸುತ–ಭ್ರಾತೃ–ಬಂಧು–ದಾರಾದಿ–ಸಂಗಮಃ। ಪ್ರಪಾಯಾಮಿವ ಜಂತೂನಾಂ ನದ್ಯಾಂ ಕಾಷ್ಠೌಘವಚ್ಚಲಃ॥' ತಾಯಿ, ತಂದೆ, ಮಗ, ಸಹೋದರ, ನೆಂಟರು ಇವರು ನಮ್ಮೊಂದಿಗೆ ಶಾಶ್ವತವಾಗಿರುವುದಿಲ್ಲ. ಅರವಟ್ಟಿಗೆಗೆ ನೀರುಕುಡಿಯಲು ಬಂದು ಹೋಗುವ ಜನರಂತೆ, ನದಿಯಲ್ಲಿ ತೇಲುತ್ತಿರುವ ಮರದ ತುಂಡುಗಳಂತೆ ಕ್ಷಣಿಕ ಎಂದಿದೆ ಗರುಡ ಪುರಾಣ (8.105). ಇವರೆಲ್ಲರೂ ಒಂದಷ್ಟು ಕಾಲ ನಮ್ಮೊಡನಿದ್ದು ನಂತರದಲ್ಲಿ ನಮ್ಮನ್ನು ಅಗಲುವುದು ನಿಶ್ಚಿತ ಎಂದಿರುವ ಶ್ರೀಮದ್ರಾಮಾಯಣದ ಅಯೋಧ್ಯಾಕಾಂಡದ ಈ ಶ್ಲೋಕ– 'ನಾಮುತ್ರ ಹಿ ಸಹಾಯಾರ್ಥಂ ಪಿತಾ ಮಾತಾ ಚ ತಿಷ್ಠತಃ । ನ ಪುತ್ರ ದಾರಾ ನ ಜ್ಞಾತಿಃ ಧರ್ಮಸ್ತಿಷ್ಠತಿ ಕೇವಲಃ॥' ತಂದೆ, ತಾಯಿ, ಮಕ್ಕಳು, ಹೆಂಡತಿ, ನೆಂಟರು ಪರಲೋಕದಲ್ಲಿ ಸಹಾಯ ಮಾಡುವುದಿಲ್ಲ. ವ್ಯಕ್ತಿ ಮಾಡಿದ ಧರ್ಮವೊಂದೇ ಅವನನ್ನು ಕಾಪಾಡುವುದು (ಮನುಸ್ಮೃತಿ 4.239) 'ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಕ್ಷಿತೌ । ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ॥' ಸತ್ತ ಮೇಲೆ ಆ ಶರೀರ ಸೌದೆಯೋ, ಮಣ್ಣಿನ ಹೆಂಟೆಯೋ ಎಂಬಂತೆ ಶವವನ್ನು ಬಿಟ್ಟು ಎಲ್ಲರೂ ಹಿಂತಿರುಗುತ್ತಾರೆ. ಆದರೆ ಅವನನ್ನು ಎಲ್ಲೆಲ್ಲೂ ಹಿಂಬಾಲಿಸುವುದು ಅವನ ಪುಣ್ಯಫಲವೇ ಎಂದಿರುವ ಮನುಸ್ಮೃತಿಯ ಈ ಶ್ಲೋಕಗಳನ್ನು ಗಮನಿಸಬೇಕು.

ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ನಮ್ಮ ನಿಜವಾದ ಮಿತ್ರ ಯಾರು? ಎಂಬ ಪ್ರಶ್ನೆಗೆ 'ಧರ್ಮ, ಧರ್ಮವೊಂದೇ' ಎಂಬ ಉತ್ತರ ಸಿಕ್ಕಿದೆ. 'ಯಾವುದನ್ನೂ ಯಾರೋ ಹೇಳಿದರು ಎಂಬ ಕಾರಣಕ್ಕೆ ನಂಬಬೇಡ, ಅದನ್ನು ಪರೀಕ್ಷಿಸಿ ನಿಜ ಎಂದು ತಿಳಿದರೆ ನಂಬು' ಎಂದಿದೆ ವಿಜ್ಞಾನ. ಇದೇ ಸಂಬಂಧವಾಗಿ 'ನಿಜವಾದ ಮಿತ್ರ ಯಾರು? ಎಂಬ ಬಗ್ಗೆ ಒಬ್ಬ ಗುರು ಶಿಷ್ಯರಿಗೆ ಹೇಳಿದ ಕಥೆಯೊಂದು ಹೀಗಿದೆ:

ತಾನು ಎಷ್ಟು ವರ್ಷ ಬದುಕುತ್ತೇನೆ? ಎಂಬುದನ್ನು ತಿಳಿಯುವ ಕುತೂಹಲದಿಂದ ತನ್ನ ಆಯುಷ್ಯ ಎಷ್ಟು ಎಂದು ವ್ಯಕ್ತಿಯೊಬ್ಬ ಜ್ಯೋತಿಷಿಯ ಸಲಹೆ ಕೇಳಿದಾಗ, "ಶೀಘ್ರದಲ್ಲಿಯೇ ನಿನ್ನ ಅಂತ್ಯವಾಗಲಿದೆ. ನಿನ್ನವರು ಎಂದು ನೀನಂದುಕೊಂಡವರನ್ನೆಲ್ಲಾ ಬಿಟ್ಟು ಒಂಟಿಯಾಗುವೆ" ಎಂಬ ಭವಿಷ್ಯ ನುಡಿದನು. ವ್ಯಕ್ತಿಗೆ ಹೆದರಿಕೆ ಶುರುವಾಯಿತು. ಇಷ್ಟು ಕಾಲ ನಾನು ಇಷ್ಟೊಂದು ಜನರ ನಡುವೆ ಇದ್ದವನು ಮುಂದೆ ನಾನೊಬ್ಬನೇ ಸಮಾಧಿಯಲ್ಲಿರಬೇಕೇ? ಉಹೂಂ, ನನ್ನಿಂದಾಗದು. ನನ್ನ ಜೊತೆಗೆ ಯಾರಾದರೂ ಒಬ್ಬರು ಇರಬೇಕು. ಯಾರಿರ್ತಾರೆ? ನನ್ನವರೆಲ್ಲರನ್ನೂ ಕೇಳಿ ನೋಡೋಣ ಎನಿಸಿ, ತನ್ನ ಆಪ್ತರು ಎನಿಸಿಕೊಂಡವರನ್ನು ಒಬ್ಬೊಬ್ಬರನ್ನಾಗಿ ಕೇಳತೊಡಗಿದನು. ಮೊದಲ ಸರದಿ ಒಬ್ಬ ಗೆಳೆಯನದು. ಸಾಯುವವರೆಗೂ ನಾ ನಿನ್ನ ಜೊತೆ ಇರುತ್ತೇನೆ. ನೀ ಸತ್ತ ಮೇಲೆ ನಾನು ನಿನ್ನ ಸಂಗಡ ಹೇಗಿರೋಕೆ ಆಗುತ್ತೆ? ಆಗ ಬೇಕಾದರೆ ನಿನ್ನ ನನ್ನ ಸ್ನೇಹದ ಗುರುತಾಗಿ ನಿನ್ನ ಸಮಾಧಿಯ ಮೇಲೆ ಸುಂದರವಸ್ತ್ರ ಹೊದಿಸಿ, ಪುಷ್ಪಗುಚ್ಛ ಇಡ್ತೇನಪ್ಪಾ ಅಷ್ಟೇ ಎಂದು ಜಾರಿಕೊಂಡ.

ಈಗ ಎರಡನೆಯ ಮಿತ್ರನೊಡನೆ ತನ್ನ ಪ್ರಸ್ತಾವನೆ ತಿಳಿಸಿದಾಗ, ನೋಡಪ್ಪಾ ಸಾವಾದ ಮೇಲೂ ನಿನ್ನೊಡನೆ ಇರಲು ಯಾರಿಗೂ ಸಾಧ್ಯವಿಲ್ಲ. ನಿನ್ನ ಅಂತ್ಯವಾದ ಮೇಲೆ, ನಿನ್ನನ್ನು ಹೆಗಲ ಮೇಲೆ ಹೊತ್ತು ಸ್ಮಶಾನದವರೆಗೂ ಸಾಗಿಸಿ ಗೋರಿಯಲ್ಲಿಡಬಲ್ಲೆ. ನಂತರ ಎಲ್ಲರೂ ನಿನ್ನನ್ನು ತ್ಯಜಿಸುವವರೇ ಎಂದ. ಬಹಳ ಆಪ್ತ ಎಂದು ದೃಢವಾಗಿ ನಂಬಿದ ಮಿತ್ರ ಇಲ್ಲೊಬ್ಬನಿದ್ದಾನೆ. ಇವನನ್ನು ಕೇಳೋಣ ಎನ್ನುತ್ತಾ ಆ ಮೂರನೆಯ ಮಿತ್ರನಿಗೆ ತನ್ನ ಪ್ರಸ್ತಾವನೆ ತಿಳಿಸಿದಾಗ, ನೀನೇನೂ ಚಿಂತಿಸಬೇಡ, ಸತ್ತ ಮೇಲೂ ನಾ ನಿನ್ನ ಸಂಗಡವೇ ಇರ್ತೇನೆ. ನೀ ಎಲ್ಲೆಲ್ಲಿ ಹೋದರೆ ಅಲ್ಲೆಲ್ಲಾ ನಿನ್ನ ಜೊತೆಯೇ ಇರ್ತೇನೆ ಎಂದ ಆಪ್ತಮಿತ್ರ. ಈ ಉತ್ತರ ಕೇಳಿ ನಮ್ಮೀ ವ್ಯಕ್ತಿಗೆ ಬಹಳ ಖುಷಿಯಾಯಿತು".

ಈ ಕಥೆಯನ್ನು ಹೇಳಿ ಮುಗಿಸಿದ ಗುರುವು ತಮ್ಮ ಶಿಷ್ಯರನ್ನು ಕುರಿತು, ಈ ಮೂವರು ಮಿತ್ರರು ಯಾರು ಎಂಬುದನ್ನು ಹೇಳಬಲ್ಲಿರಾ ? ಎಂದು ಪ್ರಶ್ನಿಸಿದಾಗ, ಉತ್ತರ ತೋಚದೆ ಶಿಷ್ಯರೆಲ್ಲರೂ ಮೌನವಹಿಸಿದರು. ಆಗ ಗುರುವೆಂದರು :

ಮೊದಲ ಮಿತ್ರ : ನಮ್ಮೊಡನಿರುವ ಸಿರಿ, ಸಂಪತ್ತು. ಯಾರು ಏನು ಮಾಡದಿದ್ದರೂ ಇವು ನಮ್ಮನ್ನು ಸದಾ ರಕ್ಷಿಸುತ್ತದೆ ಎಂದು ತಿಳಿಯುತ್ತೇವೆ. ಆದರೆ ಇದು ಎಲ್ಲಿಯವರೆಗೆ ನಮ್ಮೊಡನೆ ಸಾಗಿ ಬರುತ್ತದೆ ಎಂದರೆ ಅಂತ್ಯಸಂಸ್ಕಾರಕ್ಕೆ ಅಗತ್ಯವಾದ ಖರ್ಚೆಲ್ಲವನ್ನೂ ಭರಿಸುತ್ತದೆ. ವ್ಯಕ್ತಿ ಗೋರಿ ಸೇರಿದ ಕ್ಷಣ ಇದು ವ್ಯಕ್ತಿಯಿಂದ ದೂರವಾಗುತ್ತದೆ.

ಎರಡನೆಯ ಮಿತ್ರ : ಜನ್ಮ ನೀಡಿದ ಮಾತಾ, ಪಿತರು, ಒಡಹುಟ್ಟಿದವರು, ಬಂಧು–ಮಿತ್ರರು. ಇವರು ಸ್ಮಶಾನದವರೆಗೆ ನಮ್ಮನ್ನು ಹಿಂಬಾಲಿಸಬಲ್ಲರು. ನಾವು ಸಮಾಧಿ ಸೇರಿದ ಕ್ಷಣದಿಂದ ಇವರೆಲ್ಲರೂ ತಮ್ಮ ತಮ್ಮ ಸ್ವಸ್ಥಾನಗಳಿಗೆ ಹಿಂತಿರುಗುವರು.

ಮೂರನೆಯ ಮಿತ್ರ : ಇದೇ ನಮ್ಮ ಜೀವಿತಾವಧಿಯಲ್ಲಿ ಮಾಡಿದ ಪುಣ್ಯ, ಧರ್ಮ ಕಾರ್ಯಗಳು. ವ್ಯಕ್ತಿಯನ್ನು ಯಾರು ತ್ಯಜಿಸಿದರೂ ಜೀವಂತ ವಾಗಿರುವಾಗ, ಅನಂತರ, ಹೀಗೆ ಎಲ್ಲ ಕಾಲಗಳಲ್ಲೂ ನಮ್ಮನ್ನು ನೆರಳಿನಂತೆ ಹಿಂಬಾಲಿಸುವುದು ನಮ್ಮ ಕರ್ಮಫಲಗಳು ಎನ್ನುವುದರೊಂದಿಗೆ ಈ ಗುರುಶಿಷ್ಯರ ಕಥಾಪ್ರಸಂಗವು ಮುಕ್ತಾಯಗೊಳ್ಳುತ್ತದೆ.

ಸಾವಿನ ನಂತರವೂ ಯಾರಾದರೂ ನಮ್ಮ ಜೊತೆ ಬರಲು ಸಾಧ್ಯವೇ! ಈ ಕಟು ಸತ್ಯ ಯಾರಿಗೆ ತಿಳಿದಿರುವುದಿಲ್ಲ? ಇದೆಲ್ಲಾ ಕಟ್ಟುಕತೆ ಎಂದೋ, ಇದೆಲ್ಲಾ ಸಣ್ಣ ಮಕ್ಕಳಿಗೆ ಹೇಳಿ ನಂಬಿಸಲರ್ಹವಾದ ಕಥೆ ಎಂದೆಲ್ಲಾ ವ್ಯಾಖ್ಯಾನ ಮಾಡದೆ, ಈ ಪ್ರಸಂಗದಲ್ಲಿ ಗುರುವು ಶಿಷ್ಯರಿಗೆ ತಿಳಿಸಲು ಪ್ರಯತ್ನಿಸುತ್ತಿರುವ ನೀತಿಪಾಠ ಗಮನಿಸಬೇಕು. 'ವಿದ್ಯಾವಂತರು, ಬುದ್ಧಿವಂತರು, ಲೋಕಜ್ಞಾನಬಲ್ಲವರು, ಹಲವಾರು ಧರ್ಮಗ್ರಂಥಗಳನ್ನು ಕರತಲಾಮಲಕ ಮಾಡಿಕೊಂಡವರು, ಎಲ್ಲವನ್ನೂ ಬಲ್ಲವರು' ಎಂದೆಲ್ಲಾ ಆತ್ಮಸ್ತುತಿ ಮಾಡಿಕೊಳ್ಳುವ ನಾವು, ಸಿರಿ, ಸಂಪತ್ತು, ಹೆಣ್ಣು, ಹೊನ್ನು, ಮಣ್ಣು ಇವೆಲ್ಲ ಅಶಾಶ್ವತ ಇವು ಅಂತ್ಯಕಾಲದಲ್ಲಿ ನಮ್ಮ ಜೊತೆ ಬರುವುದಿಲ್ಲ ಎಂಬುದು ಚೆನ್ನಾಗಿ ತಿಳಿದಿದ್ದರೂ, ಈ ಬಗ್ಗೆ ಆಗಾಗ್ಗೆ ನಮ್ಮೊಳಗಿನ ಎಚ್ಚರಿಕೆಗಂಟೆಯನ್ನು ಸುಮ್ಮನಾಗಿಸುತ್ತಿಲ್ಲವೇ? ಇವೆಲ್ಲವನ್ನೂ ನಾವು ಆಗಾಗ್ಗೆ ಬೇರೆಯವರಿಗೆ ಉಪದೇಶಿಸುತ್ತಿದ್ದರೂ, ಸತ್ಕರ್ಮದಿಂದ ಸತ್ಫಲ, ದುಷ್ಕರ್ಮದಿಂದ ದುಷ್ಫಲ ಎಂಬ ಸತ್ಯವನ್ನು ನಾವು ಚೆನ್ನಾಗಿ ಅರಿತಿದ್ದರೂ ಇವನ್ನು ಆಚರಿಸದೆ, ಅಧರ್ಮ, ಅನ್ಯಾಯ, ಮೋಸ, ವಂಚನೆ, ಪರನಿಂದನೆ, ಸ್ವಾರ್ಥ ಸಾಧನೆ, ಬೇಧಭಾವ, ಹಿಂಸೆ, ಕ್ರೌರ್ಯ, ಇತ್ಯಾದಿ ಪಾಪಕಾರ್ಯಗಳಲ್ಲೇ ಸದಾ ನಿರತರಾಗುತ್ತಿಲ್ಲವೇ! ಮುಂದಿನ ಜನ್ಮ ಅನ್ನೋದು ಇದೆಯೋ ಇಲ್ಲವೇ! ಇದನ್ನು ನೋಡಿ ಬಂದವರಾರು? ಈ ಲೋಕದಲ್ಲಿ ಇರುವವರೆಗೂ ಇಲ್ಲಿರುವುದೆಲ್ಲವನ್ನೂ ನಾವು, ನಮ್ಮವರು, ಮುಂದಿನ ಪೀಳಿಗೆಯವರು ಪೂರ್ತಿ ಅನುಭವಿಸಬೇಕು ಎನ್ನುತ್ತಿಲ್ಲವೇ? ಇದೆಲ್ಲದರ ಆತ್ಮಾವಲೋಕನಕ್ಕೆ ಇದು ಸಕಾಲವಲ್ಲವೇ!?

ಈ ಸತ್ಯ ತಿಳಿಸಿದಾಗ, ಇದೆಲ್ಲಾ ಇದುವರೆಗೂ ನಾ ಯೋಚಿಸಲಿಲ್ಲಪ್ಪಾ, ತಪ್ಪು ಮಾಡಿದೆ', ಮುಂದೇನು ಮಾಡಬೇಕು ಹೇಳಿ ಎನ್ನುವವರು, 'ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಾಃ । ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥' ಈ ನಮ್ಮ ಶರೀರ ಯಾವ ಕ್ಷಣದಲ್ಲಾದರೂ ನಾಶವಾಗಬಹುದು. ಪ್ರತಿಘಳಿಗೆಯಲ್ಲೂ ಮೃತ್ಯು ಹತ್ತಿರ ಬರುತ್ತಿರುತ್ತದೆ. ನಮ್ಮ ಜೀವಿತಾವಧಿಯಲ್ಲಿ ಏನೆಲ್ಲಾ ಸಂಪಾದಿಸಿದ್ದರೂ ಇಹಲೋಕವನ್ನು ಬಿಡುವಾಗ ಇವು ಯಾವುವೂ ನಮ್ಮೊಂದಿಗೆ ಬರಲಾರವು. ನಮ್ಮೊಂದಿಗೆ ಸದಾ ನೆರಳಾಗಿ ಹಿಂಬಾಲಿಸುವುದು, ನಾವು ನಿರ್ವಹಿಸಿದ ಧರ್ಮ, ನಮ್ಮ ಆತ್ಮ ಸಾಕ್ಷಿಯಂತೆ ಮಾಡಿದ ನಮ್ಮ ಕರ್ಮದ ಫಲ ಎಂಬ ಕಹಿಸತ್ಯವನ್ನು ಸದಾ ನಾವು ನೆನಪಿಟ್ಟು, ಧರ್ಮಕಾರ್ಯಗಳಲ್ಲಿ ನಿರತರಾಗಿ, 'ಸತ್ಯಂ ಮಾತಾ ಪಿತಾ ಜ್ಞಾನ ಧರ್ಮೋ ಭ್ರಾತಾ ದಯಾ ಸಖಾ । ಶಾಂತಿಃ ಪತ್ನಿ ಕ್ಷಮಾ ಪುತ್ರಃ ಷಡೇತೇ ಮಮ ಬಾಂಧವಾಃ ॥' ಎಂದು ತಿಳಿದು ಸತ್ಕರ್ಮಗಳನ್ನು ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ.

# ಮಂಗಳೂರು ವಿಭಾಗದ ಕಿಶೋರನೃತ್ಯ ಪ್ರತಿಭೋತ್ಸವ

ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್, ಮಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಸಹಯೋಗದಿಂದ ಆಯೋಜಿಸಿದ ಕಿಶೋರನೃತ್ಯ ಪ್ರತಿಭೋತ್ಸವವು ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣ'ದಲ್ಲಿ ಜರುಗಿತು.

ನಗರದ ಹದಿನೈದು ಮಂದಿ ನೃತ್ಯ ಕಿಶೋರಿಯವರ ಈ ಪ್ರದರ್ಶನದಲ್ಲಿ ಭಾಗವಹಿಸಿ ವೈವಿಧ್ಯಮಯ ನೃತ್ಯ ಪ್ರದರ್ಶನ ನೀಡಿದರು. ಕಲಾವಿದೆಯರಿಗೆ ನಗದು ಹಾಗೂ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಅವರು ದೀಪ ಪ್ರಜ್ವಲನದ ಮೂಲಕ ನೆರವೇರಿಸಿದರು. ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಮುಖ್ಯ ಅತಿಥಿಗಳಾಗಿದ್ದು ಮಕ್ಕಳ ಪ್ರತಿಭೆಯ ಪ್ರದರ್ಶನಕ್ಕೆ ಪರಿಷತ್ ನೀಡುವ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಪರಿಷತ್ತಿನ ಅಧ್ಯಕ್ಷ ಯು. ಕೆ. ಪ್ರವೀಣ್ ಸಭಾಧ್ಯಕ್ಷತೆ ವಹಿಸಿದ್ದು ಶ್ರೀಮತಿ ಭ್ರಮರಿ ಶಿವಪ್ರಕಾಶ್ ಅವರು ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ರಾಜಶ್ರೀ ಮತ್ತು ಶ್ರೀಮತಿ ಶಾರದಾಮಣಿ ಶೇಖರ್ ಸಹಕರಿಸಿದ್ದರು.

## ಚಿತ್ರಕಲಾ ಪ್ರದರ್ಶನ



ಉಡುಪಿಯ ಚಿತ್ರಕಲಾ ಮಂದಿರ ಕಲಾ ವಿದ್ಯಾಲಯ ಇಲ್ಲಿನ ವಿಭೂತಿ ಆರ್ಟ್‌ಗ್ಯಾಲರಿಯಲ್ಲಿ ಬ್ರಹ್ಮಾವರದ ನಿವೃತ್ತ ಚಿತ್ರಕಲಾ ಶಿಕ್ಷಕ ಶ್ರೀ ಕೆ. ದಿನಮಣಿ ಶಾಸ್ತ್ರೀ ಇವರು ರಚಿಸಿದ ಆಕ್ರಲಿಕ್ ಮಾಧ್ಯಮದ ಚಿತ್ರಕೃತಿಗಳ 'ಚಿತ್ತಾರ' ಎನ್ನುವ ನಾಲ್ಕು ದಿನಗಳ ಕಲಾ ಪ್ರದರ್ಶನವನ್ನು ಉಡುಪಿ ಡಯಟ್ ಉಪಪ್ರಾಂಶುಪಾಲರಾದ ಡಾ. ಕೆ. ಅಶೋಕ್ ಕಾಮತ್ ಉದ್ಘಾಟಿಸಿದರು. ಈ ಸಮಾರಂಭದ ಅಧ್ಯಕ್ಷರಾಗಿ ವಿದ್ಯಾಲಯದ ನಿರ್ದೇಶಕರಾದ ಡಾ. ಯು. ಸಿ. ನಿರಂಜನ್ ಹಾಗೂ ಅತಿಥಿಗಳಾಗಿ ಉಡುಪಿಯ ಹಿರಿಯ ಕಲಾವಿದರಾದ ಶ್ರೀ ಪಿ. ಎನ್. ಆಚಾರ್ಯ ಉಪಸ್ಥಿತರಿದ್ದರು. ಬಹಳಷ್ಟು ಮಂದಿ ಕಲಾಪ್ರೇಮಿಗಳು ಪ್ರದರ್ಶನವನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

## ಡಾ. ಕಿಶೋರ್ ಕುಮಾರ್ ರಾವ್ ಇವರಿಗೆ ಸನ್ಮಾನ




ಬಂಟ್ವಾಳ ಸರಕಾರಿ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿರುವ ಡಾ। ಕಿಶೋರ್ ಕುಮಾರ್ ರಾವ್‌ರವರು ಗರಿಷ್ಠ ಯಶಸ್ವೀ 'ಪುರುಷ ಸಂತಾನ' ನಿರೋಧ ಶಸ್ತ್ರಚಿಕಿತ್ಸೆ ನಡೆಸಿದ್ದು, ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗೌರವಿಸಲ್ಪಟ್ಟಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅಭಿನಂದನೆ ಸಲ್ಲಿಸಲಾಯಿತು.

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ –
ಇನ್ನ ಶ್ರೀನಿವಾಸ ರಾವ್ ಹಾಗೂ
ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್
ಮತ್ತು ಕುಟುಂಬ
ಶ್ರೀ ಗಣೇಶ ಕೃಪಾ, ಪೃಥ್ವಿ ಲೇ ಔಟ್, ಕೂಳೂರು, ಮಂಗಳೂರು - 575 013

PRAVEEN KUMAR ADYAPADY
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

# ರಜತಾಚರಣೆಗೆ ಮೆರಗು ನೀಡಿದ ಜೋಡಾಟ



ಯಾವುದೇ ಸಂಸ್ಥೆ ನಿರಂತರ ಚಟುವಟಿಕೆಗಳ ಮೂಲಕ 25 ವರ್ಷ ಪೂರೈಸುವುದು ಎಂದರೆ ಅದೊಂದು ಮಹತ್ತರ ಸಾಧನೆ. ಸಂಸ್ಥೆಯನ್ನು ಹುಟ್ಟು ಹಾಕುವುದು ಬಹು ಸುಲಭ. ಆದರೆ, ಅದನ್ನು ಬೆಳೆಸುವುದು, ಕ್ರಿಯಾಶೀಲವಾಗಿ ಇರಿಸುವುದು ಎಂದರೆ ತಾಯಿ ಮಗುವನ್ನು ಬೆಳೆಸಿದಷ್ಟೇ ದುಸ್ತರವಾದುದು. ಅದರ ಸಂಕಟ ಮತ್ತು ಸಂತಸ ತಾಯಿಗೆ ಮಾತ್ರ ವೇದ್ಯ.

ಛಾಯಾಗ್ರಾಹಕ, ಕಲಾವಿದ, ಸಂಘಟಕ ದೇವಾನಂದ ಭಟ್ಟರ ಕನಸಿನ ಕೂಸು ಬೆಳುವಾಯಿಯ ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ ಇತ್ತೀಚೆಗೆ ರಜತ ವರ್ಷವನ್ನು ಪೂರೈಸಿತು. ಕಳೆದೊಂದು ಸಾಲಿನಲ್ಲಿ ಹಮ್ಮಿಕೊಂಡ ಅನೇಕ ಕಲಾತ್ಮಕ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾದ ರಜತಾಚರಣೆಗೆ ಗರಿ ಇಟ್ಟಂತೆ ಸಂಪನ್ನವಾದುದು ಪ್ರಚಂಡ ಜೋಡಾಟ. ಮೂಡಬಿದ್ರಿಯ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ಬರೆದಿಡ ಬಹುದಾದ ಕಾರ್ಯಕ್ರಮವಾಗಿ ಇದು ಮೂಡಿ ಬಂತು.

ಪೂರ್ವಯೋಜನೆಯಂತೆ ಆಗಬೇಕಾದ್ದು ಜುಲೈ 30ರಂದು, ಆದರೆ ಆದದ್ದು ನವಂಬರ್ 12 ಶನಿವಾರದಂದು. ಪುರುಷ ಪ್ರಯತ್ನ ಎಷ್ಟೇ ಇದ್ದರೂ ಅಂತಿಮ ಭಗವಂತನದ್ದು ಎನ್ನುವುದಕ್ಕೆ ಸಾಕ್ಷಿ ಆದದ್ದು ಈ ಜೋಡಾಟ. ಜುಲೈನಲ್ಲಿ ರಂಗಸ್ಥಳ ತಲೆ ಎತ್ತಿ ನಿಂತಿತ್ತು, ಸುಮಾರು 5,000 ಮಂದಿಗೆ ದೋಸೆ ಹಿಟ್ಟು ಕಡೆದು ಸಿದ್ಧವಾಗಿತ್ತು, ತೆಂಕುತಿಟ್ಟಿನ ಸುಮಾರು 150 ಕಲಾವಿದರ ಗಡಣ ಕಾತರದಿಂದ ಕಲಾಪ್ರದರ್ಶನಕ್ಕೆ ಕ್ಷಣಗಣನೆ ಮಾಡುತ್ತಿತ್ತು. ಆದರೆ ಎಲ್ಲವನ್ನು ಕರ್ಫ್ಯೂ ಎಂಬ ಭೂತ ತಿಂದು ಹಾಕಿತು. ಸರ್ಕಾರದ ನಿರ್ಧಾರಕ್ಕೆ ತಲೆ ಬಾಗಲೇಬೇಕಾಯಿತು. ಸಂಘಟಕನ ನೋವನ್ನು ಯಾರಲ್ಲಿ ಹೇಳುವುದು? ಇದಕ್ಕೆಲ್ಲ ದೇವಾನಂದರು ನಂಜುಂಡರಾದರು.

ಜುಲೈನಲ್ಲಿ ಆದಷ್ಟೇ ತಯಾರಿಯೊಂದಿಗೆ ಮೂಡಬಿದ್ರಿಯ ಆಳ್ವಾಸ್ ಸಭಾಂಗಣದಲ್ಲಿ ಅಷ್ಟೇ ಕಲಾವಿದರ ಸಂಯೋಜನೆಯಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಜೋಡಾಟ ಮುಗಿದೇ ಹೋಯಿತು. ಸಹಸ್ರಾರು ಪ್ರೇಕ್ಷಕರು ಇದರ ಸವಿಯನ್ನು ಕುತೂಹಲ ದೃಷ್ಟಿಯಿಂದ ವೀಕ್ಷಿಸಿದರು. ಎರಡೂ ರಂಗಸ್ಥಳದ ವಿದ್ಯುನ್ಮಾಲಿಗಳು, ಚಂಡ ಮುಂಡರು ಜಿದ್ದಿಗೆ ಬಿದ್ದವರಂತೆ ತಮ್ಮ ಕಲಾ ಪ್ರತಿಭೆಯನ್ನು ಮೆರೆದರು. ಶುಂಭ ವಧೆಯ ಭಾಗವಂತೂ ರೋಚಕವಾಗಿ ಮೂಡಿಬಂತು. ಈ ದೃಶ್ಯ ಪರಂಪರೆಯ ನೆನಪನ್ನು ಮರುಕಳಿಸಿತು. ದೇವಿ ಮತ್ತು ಶುಂಭರು ದೊಂದಿ ಹಿಡಿದುಕೊಂಡೇ ಹೋರಾಡಿದ ದೃಶ್ಯ ಅಂತಿಮ ಘಟ್ಟಕ್ಕೆ ಮೆರುಗನ್ನು ನೀಡಿತು.

ಸಮಗ್ರ ಜೋಡಾಟವೇ ಹಳೆ ಬೇರು ಹೊಸ ಚಿಗುರುಗಳ ಸಂಗಮವಾಗಿತ್ತು. ದೈಹಿಕ ಶಕ್ತಿ, ದೀರ್ಘ ಅನುಭವ, ಕೌಶಲ್ಯ, ಪ್ರತಿಭೆಗಳ ಸಮಪಾಕವಾಗಿ ಈ ಸಂಯೋಜನೆ ಮೂಡಿ ಬಂತು. ಕೆಲ ಕಲಾವಿದರಿಗೆ ಮೊದಲ ಬಾರಿ ಜೋಡಾಟದಲ್ಲಿ ಭಾಗವಹಿಸುವ ಅವಕಾಶ, ಇನ್ನು ಕೆಲವರಿಗೆ ಹಿಂದೆ ಜೋಡಾಟಗಳಲ್ಲಿ ಭಾಗವಹಿಸಿ ಪಡೆದ ಅನುಭವಗಳ ವಿನಿಯೋಗಕ್ಕೆ ಅವಕಾಶ. ಹೊಸ ಪ್ರೇಕ್ಷಕರು ಈ ಜೋಡಾಟವನ್ನು ಬೆರಗಣ್ಣಿನಿಂದ ನೋಡಿದರೆ, ಹಿಂದೆ ಜೋಡಾಟ ನೋಡಿದ ಹಿರಿಯರಿಗೆ ತುಲನೆ ಮಾಡುವ ಸಂಭ್ರಮ. ಸುಮಾರು 8 ಗಂಟೆಗಳ ಈ ಪ್ರದರ್ಶನ ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿಯಾಯಿತು ಎನ್ನುವುದೇ ಕಾರ್ಯಕ್ರಮದ ಯಶಸ್ಸು ತಾನೇ.

ಯಕ್ಷಗಾನ ಪೂರ್ವದಲ್ಲಿ ನಡೆದ ರಜತ ಸಭಾ ಕಾರ್ಯಕ್ರಮದಲ್ಲಿ ಡಾ। ಮೋಹನ್ ಆಳ್ವ, ಶ್ರೀಪತಿ ಭಟ್, ಡಾ। ಪ್ರಭಾಕರ ಜೋಷಿ ಅವರಿಗೆ ಯಕ್ಷದೇವ ರಜತ ಪ್ರಶಸ್ತಿ, ಹಿರಿಯ ಕಲಾವಿದ ಗೋವಿಂದ ಭಟ್ ಅವರಿಗೆ ಯಕ್ಷದೇವ ರಜತ ಪುರಸ್ಕಾರ ಮತ್ತು ಎಮ್. ಕೆ. ರಮೇಶ ಆಚಾರ್ಯ ಅವರಿಗೆ ಗೌರವ ಸನ್ಮಾನಗಳನ್ನು ಮಾಡಲಾಯಿತು. ಕರ್ನಾಟಕ ಸರ್ಕಾರದ ಗೃಹಸಚಿವ ಶ್ರೀ ಅರಗ ಜ್ಞಾನೇಂದ್ರ, ಟಿ. ಶ್ಯಾಮ್ ಭಟ್, ಶಾಸಕ ಶ್ರೀ ಉಮಾನಾಥ ಕೋಟ್ಯಾನ್ ಮೊದಲಾದವರು ಕಾರ್ಯಕ್ರಮದ ಘನತೆಯನ್ನು ವರ್ಧಿಸಿದರು.

ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–

ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216




PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



M.Devanand bhat
Mob: 9845644556
9663993883
Shobha Digital STUDIO
Belavai Moodabidri Yedapadavu
08258-276177 9901995655 0824-2256374
mdevanandbhat@gmail.com

# ❋ ಭಕ್ತಿ ಶ್ರದ್ಧೆ ಇದ್ದರೆ ಗುರುಅನುಗ್ರಹ ❋



ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡುವಾಗ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ತಮ್ಮ ಮಠದಲ್ಲಿ ಜಾತಕ ನೋಡಿ ಶಿಷ್ಯರನ್ನು ಸ್ವೀಕರಿಸುವ ಪದ್ಧತಿ ಇಲ್ಲವೆಂದು ಸಕಲಜೀವಿಗಳಲ್ಲೂ ಕಾರುಣ್ಯ, ವೈರಾಗ್ಯ ಮತ್ತು ಆತ್ಮಜ್ಞಾನದ ತೀವ್ರಾಕಾಂಕ್ಷೆ ತಮ್ಮ ಶಿಷ್ಯರ ಆಯ್ಕೆಯ ಮಾನದಂಡ ಎಂದು ತಿಳಿಸಿ ಸನಾತನ ಧರ್ಮ ಸಂರಕ್ಷಣೆಯಲ್ಲಿ ತಮ್ಮ ಶಿಷ್ಯರು ಅಪ್ರತಿಮ ಪಾತ್ರ ವಹಿಸುತ್ತಾರೆ ಎಂದಿದ್ದರು. ಆ ಮಾತುಗಳು ಒಂದೊಂದೂ ಅಕ್ಷರಶಃ ಸತ್ಯವಾಗುತ್ತಿದೆ.

ಇತ್ತೀಚೆಗೆ ಶ್ರೀಗಳು ಕುಂಟವಳ್ಳಿ, ಭದ್ರಾವತಿ, ಶಿವಮೊಗ್ಗ ಮತ್ತು ಸಾಗರದ ಸಂಕ್ಷಿಪ್ತ ಯಾತ್ರೆ ಮುಗಿಸಿ ಬಂದಿದ್ದಾರೆ. ಜಗದ್ಗುರುಗಳ ಕಾರ್ಯಕ್ರಮ ನಿಗದಿಯಾದ ಮೇಲೆ ಶಿವಮೊಗ್ಗದ ಗುಡ್ಡದ ಮಲ್ಲಪ್ಪ (ಗುಡ್ಡೇ ಮಲ್ಲಿಕಾರ್ಜುನ) ದೇವಸ್ಥಾನದವರು ಶೃಂಗೇರಿಗೆ ಧಾವಿಸಿ ಬಂದು ತಮ್ಮ ದೇವಸ್ಥಾನಕ್ಕೂ ಗುರುಗಳು ಬರಬೇಕೆಂದು ಪ್ರಾರ್ಥಿಸಿದರು. ಅವರ ಭಕ್ತಿ ಗುರುಗಳ ಅರಿವಿಗೆ ಬಂದಿರಬೇಕು. ನಮ್ಮ ಎಲ್ಲಾ ಕಾರ್ಯಕ್ರಮ ನಿಗದಿಯಾಗಿದೆ. ಆದರೂ ನಿಮ್ಮ ದೇವಸ್ಥಾನಕ್ಕೆ ಸ್ವಲ್ಪ ಹೊತ್ತಿಗಾದರೂ ಬಂದು ಹೋಗುವುದಾಗಿ ಭರವಸೆ ನೀಡಿದರು.

ಅದು ಆದಾಯ ಇಲ್ಲದ ದೇವಸ್ಥಾನ. ಜೊತೆಗೆ ದೇವಸ್ಥಾನ ತಲುಪಲು ನೂರೈವತ್ತಕ್ಕೂ ಹೆಚ್ಚು ಮೆಟ್ಟಿಲು ಹತ್ತಿ ಹೋಗಬೇಕು. ಆ ಮೆಟ್ಟಿಲ ಬುಡಕ್ಕೆ ಹೋಗಲು ಅನ್ಯಧರ್ಮೀಯರು ವಾಸಿಸುವ ಪ್ರದೇಶದಲ್ಲಿ ಸಾಗಬೇಕು. ಮೊದಲೇ ಉಗ್ರರ ಚಟುವಟಿಕೆಯಿಂದ ಶಿವಮೊಗ್ಗ ತತ್ತರಿಸುತ್ತಿದೆ. ಅದರಲ್ಲೂ ಸೂರ್ಯ ಮುಳುಗುವ ಹೊತ್ತಿನಲ್ಲಿ ಅಲ್ಲಿಗೆ ಹೋಗುವುದು ತರವಲ್ಲ. ಜೊತೆಗೆ ಅಲ್ಲಿಗೆ ತಲುಪುವ ರಸ್ತೆ ಹೊಂಡಗುಂಡಿಯಿಂದಲೇ ತುಂಬಿದೆ. ಹೇಗೂ ನಿಗದಿತ ಕಾರ್ಯಕ್ರಮ ಅಲ್ಲ. ಹೋಗಿರುವುದರಿಂದ ತೊಂದರೆ ಇಲ್ಲ ಎಂದು ಗುರುಗಳಿಗೆ ಯಾರಾದರೂ ಹೇಳಿರಲೂ ಸಾಕು.

ಇತ್ತ ಅವರನ್ನು ಕರೆದವರಿಗೆ ಶೃಂಗೇರಿಯ ಶ್ರೀಗಳು ಬರುವುದೆಂದರೆ ಹುಡುಗಾಟಿಕೆ ಅಂದುಕೊಂಡಿರುವಿರಾ. ಅವರಿಗೆ ತಕ್ಕ ಗೌರವ ಕೊಡಬೇಡವೇ... ದಾರಿಯಲ್ಲಿ ಏನಾದರೂ ಅಪಚಾರವಾದರೆ ಯಾರು ಹೊಣೆ? ಇಷ್ಟೆಲ್ಲಾ ಮೆಟ್ಟಿಲೇರಿ ಅವರು ಕೆಲವೇ ಕ್ಷಣಕ್ಕೆ ಯಾಕೆ ಬರಬೇಕು... ಎಂಬಿತ್ಯಾದಿ ಮಾತುಗಳಿಂದ ಬೆದರಿಸಿದವರಿಗೆ ಕೊರತೆ ಇಲ್ಲ. ಅವರಿಗೆ ಒಂದೇ ಧೈರ್ಯ, ಗುರುಗಳು ಕೆಲ ಕ್ಷಣಾಕ್ಕಾದರೂ ಬಂದೇ ಬರುವುದಾಗಿ ಮಾತು ಕೊಟ್ಟಿದ್ದಾರೆ. ಮತ್ತೆಲ್ಲಾ ಆ ದೇವರೇ ನಡೆಸುತ್ತಾರೆ. ಹೀಗೆಂದುಕೊಂಡು ಅವರು ತಮ್ಮ ಬಡ ಭಕ್ತಿಯಿಂದ ಸಿದ್ಧತೆ ನಡೆಸತೊಡಗಿದರು. ತಳಿರು ತೋರಣ ಸೇರಿದಂತೆ ಸಾಕಷ್ಟು ಶ್ರಮ ಹಾಕಿ ಸ್ವಚ್ಛವಾದ ಪರಿಸರದಲ್ಲಿ ಶಕ್ತಿಮೀರಿ ಏರ್ಪಾಟು ಮಾಡಿಕೊಂಡರು.

ಜಗದ್ಗುರುಗಳು ಬಂದೇ ಬಿಟ್ಟರೆ ಎಂದು ಯಾರೋ ರಸ್ತೆಯ ಹೊಂಡಗುಂಡಿಗೆ ಮಣ್ಣು ಹಾಕಿಸಿದರು.

ಅಂತೂ ಆ ಸುದಿನದ ಗೋಧೂಳಿ ಲಗ್ನ ಕಳೆದ ಮೇಲೆ ಜಗದ್ಗುರುಗಳು ಅಲ್ಲಿಗೆ ಹೊರಟಿದ್ದ ಸಂಗತಿ ತಿಳಿಯಿತು. ಅವರ ವಾಹನ ಬರುವಾಗ ಅನ್ಯಧರ್ಮೀಯರ ಪ್ರದೇಶದುದ್ದಕ್ಕೂ ರಸ್ತೆಗೆ ನೀರು ಹಾಕಿ ಆ ಮಹಿಳೆಯರು ರಂಗದಲ್ಲಿ ಚಿತ್ತಾರ ಬಿಡಿಸಿದ್ದರು. ಗುರುಗಳ ವಾಹನ ಹೋಗುವಾಗ ಮನೆ ಮುಂದೆ ನಿಂತು ಭಕ್ತಿಯಿಂದ ಕೈ ಮುಗಿದರು. ಗುರುಗಳು ಪಟಪಟನೇ ಮೆಟ್ಟಿಲೇರಿದರೆ ಅವರ ಜೊತೆಗಿದ್ದವರೇ ಸುಸ್ತು. ಅಲ್ಲಿನ ಕಾರ್ಯಕ್ರಮ ಮುಗಿಸಿ, ದೇವರ ದರ್ಶನ ಮಾಡಿ, ಆಶೀರ್ವಚನ ನೀಡಿ ಗುರುಗಳು ವಾಪಸ್ಸು ಹೊರಡುವಾಗ ಅರ್ಚಕರನ್ನು ಕರೆದು ಆಶೀರ್ವಾದಪೂರ್ವಕ ಫಲಮಂತ್ರಾಕ್ಷತೆ ನೀಡುವ ಜೊತೆಗೆ ಒಂದು ಮೊತ್ತವನ್ನು ಕೇಳದಿದ್ದರೂ ದೇವಸ್ಥಾನಕ್ಕೆ ಬಳಸಿ ಎಂದು ಅನುಗ್ರಹಿಸಿದ್ದರು. ತಾವು ಖರ್ಚು ಮಾಡಿದ್ದಕ್ಕಿಂತ ಹೆಚ್ಚಿನ ಮೊತ್ತ ಗುರುಗಳ ಅನುಗ್ರಹ ಆಗಿದ್ದು ಕಂಡ ಬಡ ಅರ್ಚಕರ ಕಣ್ಣು ತುಂಬಿ ಬಂದಿತ್ತು. ಅಪಾರ ಗುರುಕರುಣೆ ಅವರ ಪ್ರತ್ಯಕ್ಷ ಅನುಭವಕ್ಕೆ ಬಂದಿತ್ತು. ಭಕ್ತಿ ಶ್ರದ್ಧೆಯಿದ್ದರೆ ಗುರುಅನುಗ್ರಹ ದೊರಕುತ್ತದೆ ಮತ್ತು ಅದು ಶ್ರೀಮಂತಿಕೆಯಿಂದ ಕೊಳ್ಳುವ ವಸ್ತು ಅಲ್ಲ ಎಂಬುದು ಅಂದು ಅಲ್ಲಿ ಸೇರಿದ ಭಕ್ತರಿಗೆ ಮನದಟ್ಟಾಯಿತು.

ಶೃಂಗೇರಿಯ ಗುರು ಪರಂಪರೆಯಲ್ಲಿ ಯಾರಿಗೂ ದೊರಕದ ಅವಕಾಶಗಳು ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀಗಳಿಗೆ ಆಗಲೇ ದೊರಕಿದೆ. ಈ ಶಂಕರರು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿ ದ್ವಾರಕೆ ಮತ್ತು ಬದರಿ ಜಗದ್ಗುರುಗಳಿಗೆ ಪಟ್ಟಾಭಿಷೇಕ ಮಾಡುವ ಹೊಣೆಯನ್ನು ಶ್ರೀಗಳು ಈಚೆಗೆ ನಿರ್ವಹಿಸಿದರು. ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರು ಹಿಂದೆ ದ್ವಾರಕೆಯ ಜಗದ್ಗುರುಗಳಿಗೆ ದ್ವಾರಕೆಯಲ್ಲೇ ಪಟ್ಟಾಭಿಷೇಕ ನೆರವೇರಿಸಿದ್ದರು. ಆದರೆ ಈರ್ವರು ಶಂಕರಾಚಾರ್ಯರ ಪಟ್ಟಾಭಿಷೇಕ ಏಕಕಾಲದಲ್ಲಿ ನಡೆಸುವ ಭಾಗ್ಯ ಈಗಿನ ಶ್ರೀಗಳದ್ದಾಯಿತು. ವಿಶೇಷ ವಿಮಾನದಲ್ಲಿ ಶ್ರೀಗಳು ಜಾಮ್‌ನಗರ ಹೋಗಿ ಮುಂದೆ ಹೆಲಿಕಾಪ್ಟರ್‌ನಲ್ಲಿ ಬದರಿ ಮತ್ತು ಕೇದಾರಕ್ಕೂ ತೆರಳಿ ಕೇದಾರೇಶ್ವರನಿಗೆ ಪೂಜೆ ಸಲ್ಲಿಸಿದರು. ಬದರಿಯಲ್ಲೂ ಶ್ರೀಗಳನ್ನು ವಿಶೇಷ ಗೌರವ ಭಕ್ತಿಯಿಂದ ಸ್ವಾಗತಿಸಲಾಯಿತು. ಅಲ್ಲೂ ಅವರು ಆಶೀರ್ವಚನ ನೀಡಿ ಅಪಾರ ಭಕ್ತರನ್ನು ಅನುಗ್ರಹಿಸಿದರು. ಅಂತಹ ಕೊರೆಯುವ ಚಳಿಯಲ್ಲೂ ವಿಚಲಿತರಾಗದ ಸನ್ನಿಧಾನದ ಸಾಮರ್ಥ್ಯ ನೋಡಿದವರು ಬೆಕ್ಕಸಬೆರಗಾದರು. ನೂತನವಾಗಿ ಪಟ್ಟಾಭಿಷಕ್ತರಾದ ಪುರಿ ಮತ್ತು ಬದರೀ ಜಗದ್ಗುರುಗಳಿದ್ದರಾದರೂ ಎಲ್ಲೆಡೆ ಕೇಂದ್ರ ಬಿಂದು ಆಗಿದ್ದು ಶೃಂಗೇರಿಯ ಜಗದ್ಗುರುಗಳೇ. ಅವರಲ್ಲಿ ಅಷ್ಟು  ಶಕ್ತಿ ಸಾಮರ್ಥ್ಯವನ್ನು ಮಹಾಸನ್ನಿಧಾನ ತುಂಬಿ ಆಗಿದೆ. ಜೊತೆಗೆ ಶೃಂಗೇರಿಯ ಪೀಠದ ಮಹತ್ವವೇ ಅಂತಹುದು. ಅಲ್ಲಿನ ಪೀಠಾಧ್ಯಕ್ಷರ ಮಹತ್ವವೇ ಬೇರೆ. ಸನಾತನ ಧರ್ಮದ ಧಾರ್ಮಿಕ ಸಾಮ್ರಾಜ್ಯದ ಸಾರ್ವಭೌಮ ಸ್ಥಾನ ಅವರದ್ದು. ಉತ್ತರ ಭಾರತದ ಆ ತೀರ್ಥಕ್ಷೇತ್ರಗಳಲ್ಲಿ ಶೃಂಗೇರಿಯ ಜಗದ್ಗುರುಗಳಿಗಿರುವ ಗೌರವಾದರ ಮತ್ತೆ ಸಿದ್ಧಗೊಂಡ ಕ್ಷಣಗಳವು. ಶೃಂಗೇರಿ ಶ್ರೀಗಳು ಹಿಂದಿಯಲ್ಲಿ ನೀಡಿದ ಆಶೀರ್ವಚನವಂತೂ ಧರ್ಮ ಪ್ರಬೋಧಕವಾಗಿದ್ದುದನ್ನು ಎಲ್ಲರೂ ಅನುಭವಕ್ಕೆ ತಂದುಕೊಂಡರು.

ಈ ನಡುವೆ ಶೃಂಗೇರಿಯ ಈ ಮಹತ್ವ ನೋಡಿ ಸಂಕಟಪಟ್ಟವರೂ ಇದ್ದರು. ಬದರಿಯಲ್ಲಿ ನಾವೇ ಶಂಕರಾಚಾರ್ಯರು ಎಂದೊಬ್ಬ ಯತಿ ಕೋರ್ಟಿನ ಮೊರೆ ಹೋಗಿ ಹದಿನೇಳು ವರ್ಷ ಸಂದಿದೆ. ಅವರೊಳಗೆ ಎಲ್ಲೂ ಜಯ ದೊರಕಿಲ್ಲ.

ಜೊತೆಗೆ ದ್ವಾರಕೆ ಜಗದ್ಗುರುಗಳಾಗಿ ಹೊಣೆ ನಿರ್ವಹಿಸಿದ್ದರು. ಅವರು ಎರಡೂ ಪೀಠಕ್ಕೂ ಉತ್ತರಾಧಿಕಾರಿ ನೇಮಕ ಸಹ ಮಾಡಿದ್ದರು. ಇಬ್ಬರ ಪಟ್ಟಾಭಿಷೇಕ ಶೃಂಗೇರಿಯ ಜಗದ್ಗುರುಗಳೇ ಮಾಡಬೇಕು ಎಂದು ತಿಳಿಸಿದ್ದರು. ಅವರು ಬ್ರಹ್ಮೈಕ್ಯರಾದ ಮೇಲೆ ಈ ಕಾರ್ಯಕ್ರಮಕ್ಕೆ ಮಹಾಸನ್ನಿಧಾನ ಅಪ್ಪಣೆ ನೀಡಿದಂತೆ ಸನ್ನಿಧಾನ ತೆರಳಿದ್ದು.

ಸ್ಥಾಪಿತ ಹಿತಾಸಕ್ತಿಗಳಿಂದ ಅಸಂಬದ್ಧ ಹೇಳಿಕೆಗಳನ್ನು ನೀಡಿಸಿ ಹರಿಬಿಡಲಾಯಿತು. ಅಷ್ಟು ಮಾತ್ರವಲ್ಲ ರಾಜಧಾನಿ ದೆಹಲಿಯಲ್ಲಿ ಗೋವಿಂದಾಚಾರ್ಯರು ಪತ್ರಿಕಾಗೋಷ್ಠಿ ಸಹ ನಡೆಸಿದರು. ಇದರ ಜೊತೆಗೆ ಸುಪ್ರೀಂಕೋರ್ಟ್ ಮೆಟ್ಟಿಲೇರಿದ ಕೆಲವರು ಬದರಿ ಶ್ರೀಗಳ ಪಟ್ಟಾಭಿಷೇಕ ಆಗದಂತೆ ತಡೆಯಾಜ್ಞೆ ಸಹ ತಂದರು. ತಮ್ಮ ಗುರುಗಳ ಆಜ್ಞೆಯೇ ತಮಗೆ ಅಂತಿಮ ಎಂದು ನಂಬುವ ಸನ್ನಿಧಾನ ದ್ವಾರಕೆಯಲ್ಲೇ ಪಟ್ಟಾಭಿಷೇಕ ನಡೆಸಿದರು. ಇದು ನ್ಯಾಯಾಂಗ ಆದೇಶ ನಿಂದನೆ ಎಂದು ಕೆಲವರು ಹೇಳಿದರಾದರೂ ಶುದ್ಧ ಧರ್ಮ ಸಂರಕ್ಷಕರಾದ ಶೃಂಗೇರಿಯ ಶ್ರೀಗಳನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ಕಟಕಟೆಯಲ್ಲಿ ನಿಲ್ಲಿಸಲಾರದು. ಧರ್ಮದ ವಿಚಾರ ಬಂದಾಗ ನ್ಯಾಯಾಂಗ ಸಹ ಶೃಂಗೇರಿಯ ಸಲಹೆ ಪಡೆದ ಉದಾಹರಣೆ ಇದ್ದೇ ಇದೆ. ಜೊತೆಗೆ ಚತುರಾಮ್ನಾಯ ಪೀಠಕ್ಕೆ ನೇಮಕ ನ್ಯಾಯಾಂಗ ಮಾಡುವುದಾ, ಶೃಂಗೇರಿಯ ಜಗದ್ಗುರುಗಳಾ ಎಂಬ ಪ್ರಶ್ನೆ ಎದ್ದರೆ ಭಾರತ ಸರ್ಕಾರ ಸಹ ಜಗದ್ಗುರುಗಳ ಹಕ್ಕನ್ನು ಮೊಟಕುಗೊಳಿಸಲಾರದು.

ಭರತ ವರ್ಷದಲ್ಲಿ ಇನ್ನೊಂದು ಮಹತ್ವದ ಘಟನೆ ಆರಂಭವಾಗಿದೆ. ಕಾಶ್ಮೀರದಲ್ಲಿ ಶಾರದೆಯ ಮಂದಿರದ ಶೃಂಗೇರಿ ಜಗದ್ಗುರುಗಳ ಆಶೀರ್ವಾದದಿಂದ ನಿರ್ಮಾಣ ಆಗುತ್ತಿದೆ. ಆ ಮಂದಿರ ಮೂರ್ತಿ ಇಲ್ಲಿಂದಲೇ ಜಗದ್ಗುರುಗಳಿಂದ ಪೂಜಿಸಲ್ಪಟ್ಟು ರವಾನೆ ಆಗಿದೆ. ಈ ದೇವಸ್ಥಾನ ನಾಲ್ಕು ದ್ವಾರ ಹೊಂದಿರುತ್ತದೆ. ಒಂದೊಂದು ದ್ವಾರ ಒಂದೊಂದು ಆಮ್ನಾಯ ಪೀಠ ಪ್ರತಿನಿಧಿಸುತ್ತಿದೆ. ಮೊದಲಿಗೆ ಶೃಂಗೇರಿ ಪೀಠ ಪ್ರತಿನಿಧಿಸುವ ದಕ್ಷಿಣ ದ್ವಾರ ನಿರ್ಮಿಸಲಾಗಿದೆ. ಆ ದ್ವಾರದ ಮೇಲ್ಭಾಗದಲ್ಲಿ ಅಹಂ ಬ್ರಹ್ಮಾಸ್ಮಿ ಎಂಬ  ಶೃಂಗೇರಿಯ ಘೋಷವಾಕ್ಯ ಕೆತ್ತಲಾಗಿದೆ. ಈ ಮಂದಿರ ಸಂಕೀರ್ಣಕ್ಕೆ ಹಣಕಾಸಿನ ಕೊರತೆ ಬಾರದಂತೆ ಶೃಂಗೇರಿ ಪೀಠದ ರಕ್ಷಣೆ ಇದೆ. ಇಷ್ಟು ಮಾತ್ರವಲ್ಲ ಇದರ ಕುಂಭಾಭಿಷೇಕ ಶೃಂಗೇರಿ ಜಗದ್ಗುರುಗಳಿಂದಲೇ ನಡೆಸಬೇಕೆಂದು ನಿರ್ಮಾಣ ಕಾರ್ಯದಲ್ಲಿ ತೊಡಗಿದ ಎಲ್ಲರ ಒಕ್ಕೊರಲ ಬೇಡಿಕೆ ಆಗಿದೆ. ಮಹಾಸನ್ನಿಧಾನ ಆಜ್ಞೆ ಇತ್ತರೆ ಸನ್ನಿಧಾನ ಈ ಕಾಶ್ಮೀರ ಪುರವಾಸಿನಿ ಶಾರದೆಯ ಮಂದಿರದ ಕುಂಭಾಭಿಷೇಕ ನಡೆಸಬಹುದು. ಶಂಕರಾಚಾರ್ಯರೇ ಮತ್ತೆ ಶ್ರೀ ಶ್ರೀ ವಿಧುಶೇಖರ ಭಾರತೀಯವರ ರೂಪದಲ್ಲಿ ನಮ್ಮ ಮುಂದಿದ್ದಾರೆ ಎಂಬುದು ನಿಶ್ಶಂಶಯ.

**ಶ್ರೀ ಪ್ರಭಾಕರ ಕಾರಂತ್, ಹೊಸಕೊಪ್ಪ**

# 'ಅಪ್ಪ - ಅಮ್ಮ - ಜೋಕುಳ್ಞೊ ಪೊರ್ಲುದೊ ಕೂಟ'

ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ಮಹಿಳಾ ವೇದಿಕೆಯಿಂದ 'ಅಪ್ಪ–ಅಮ್ಮ–ಜೋಕುಳ್ಞೊ ಪೊರ್ಲುದೊ ಕೂಟ' ಎಂಬ ವಿಶಿಷ್ಟವಾದ ಕಾರ್ಯಕ್ರಮವನ್ನು ದಿನಾಂಕ 27–11–2022ನೇ ಭಾನುವಾರ ಶ್ರೀ ಬಾಲಗಣಪತಿ–ಪ್ರಸನ್ನಪಾರ್ವತಿ ದೇವಳದ ವಠಾರದಲ್ಲಿ ಆಚರಿಸಲಾಯಿತು. ಬೆಳಗ್ಗೆ 11-00 ಗಂಟೆಗೆ ಐವರು ಮಾತೆಯರು ತಮ್ಮ ಪುಟ್ಟ ಕಂದಮ್ಮಗಳೊಂದಿಗೆ ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಗೊಳಿಸಿದರು. ನಂತರ ಸಂಘದ ಸಂಘಟಕರಾದ ಶ್ರೀ ದಿವಾಕರ ರಾವ್ ಇವರು ಬಾಲ್ ಎಸೆಯುವುದರ ಮೂಲಕ ಸ್ಪರ್ಧೆಗಳಿಗೆ ಚಾಲನೆ ನೀಡಿದರು.


ಲಘು ಉಪಾಹಾರದ ನಂತರ ವಯೋಮಾನಕ್ಕನುಗುಣವಾಗಿ ವಿವಿಧ ವಿಭಾಗಗಳಲ್ಲಿ ಚಾಕಲೇಟ್ ಹೆಕ್ಕುವುದು, ನಾಯಿಗೆ ಬಾಲ ಬಿಡಿಸುವುದು, ಲಿಂಬೆ–ಚಮಚ ಓಟ, ಸಂಗೀತ ಕುರ್ಚಿ, ಮಡಿಕೆ ಒಡೆಯುವುದು, ಪಿಕ್ & ಆಕ್ಟ್ ಮೊದಲಾದ ಅದೃಷ್ಟದ ಆಟಗಳನ್ನು ಆಡಿಸಲಾಯಿತು.

ಮಧ್ಯಾಹ್ನದ ಭೋಜನದ ಬಳಿಕ ಸಭಾ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ ರಾವ್, ಪಡುಬಿದ್ರಿ ಅತಿಥಿಗಳಾಗಿ ಮಕ್ಕಳ ಪರವಾಗಿ ಫಲಿಮಾರಿನ ಕು। ಸೃಜನಾ ಶ್ರೀಕಾಂತ್ ರಾವ್, ಸಂಘದ ಮಹಿಳಾ ನಿರ್ದೇಶಕರಾದ ಶ್ರೀಮತಿ ರೇಖಾ ಯೋಗೀಶ್ ರಾವ್, ಮುಂಡ್ಕೂರು, ಸಂಘದ ಖಂಜಾಚಿಯಾದ ಶ್ರೀ ಬಿ. ಅರವಿಂದ್ ರಾವ್, ಪಡುಬಿದ್ರಿ, ಸಂಘದ ನಿರ್ದೇಶಕರು ಹಾಗೂ ಕ್ರೀಡಾ ಕಾರ್ಯದರ್ಶಿಯಾಗಿರುವ ಶ್ರೀ ಕೃಷ್ಣರಾಜ ರಾವ್, ಮುದರಂಗಡಿ, ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಇನ್ನ ಹಾಗೂ ಸಂಚಾಲಕಿ ಶ್ರೀಮತಿ ಸಾವಿತ್ರಿ ಅರವಿಂದ್ ರಾವ್, ಪಡುಬಿದ್ರಿ



ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಎರ್ಮಾಳಿನ ಶ್ರೀಮತಿ ಲಲಿತಾ ಪ್ರಭಾಕರ್ ರಾವ್, ಸೊಸೆ ಶ್ರೀಮತಿ ಆಶಾ ರಾಜೇಶ್ ರಾವ್ ಮತ್ತು ಮೊಮ್ಮಗಳು ಕು। ವೈಷ್ಣವಿ ಮಾಡಿದರು. ಕು। ಮಂಜುಶ್ರೀ ಪಾದೆಬೆಟ್ಟು ಸ್ವಾಗತಿಸಿದರೆ ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ್ ರಾವ್ ಪ್ರಸ್ತಾವನೆಗೈದರು. ವೇದಿಕೆಯಲ್ಲಿದ್ದ ಗಣ್ಯರು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿದರು. ಕು। ಸೃಜನಾ ಮತ್ತು ಅಧ್ಯಕ್ಷರಾದ ಶ್ರೀ ಮೋಹನ್ ರಾವ್ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ತಿಳಿಸಿದರು. ಮುಂಡ್ಕೂರಿನ ಕು। ಸ್ವಾತಿ ಬೆಳ್ಳೆ ಧನ್ಯವಾದವಿತ್ತರು. ಪಡುಬಿದ್ರೆಯ ಶ್ರೀಮತಿ ಲಲಿತಾಂಬಾ ವೈ. ಶಾಸ್ತ್ರೀ ಎಲ್ಲಾ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಅಪಾರಕೀರ್ತಿ ಗಳಿಸಿ



ಕರಾಡದ ಶ್ರೀ ವೈ. ಚಂದ್ರಶೇಖರ್ ರಾವ್ ಹಾಗೂ ಶ್ರೀಮತಿ ಪ್ರಸನ್ನರವರ ಸುಪುತ್ರ ಡಾ. ಅಖಿಲ್ ರಾವ್ SRM ವಿಶ್ವವಿದ್ಯಾನಿಲಯದ MDS ENDODONICTSನಲ್ಲಿ ಚಿನ್ನದ ಪದಕದೊಂದಿಗೆ ಪ್ರಥಮ ರ್‍ಯಾಂಕ್ ಗಳಿಸಿದ್ದು ಲೋಕಸಭಾ ಸ್ಪೀಕರ್ ಶ್ರೀ ಓಂ ಬಿರ್ಲಾ ಇವರು ಅಭಿನಂದಿಸಿದರು.


ರಾಮಾ ಅಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–



ಶ್ರೀ ಸೋಮಶೇಖರನ್

ಮತ್ತು

ಶ್ರೀಮತಿ ಅರುಣಾ ಸೋಮಶೇಖರನ್

ಚಿಲಿಂಬಿ, ಮಂಗಳೂರು

Muralidhara Rao Adyapadi
Proprietor

Mob : 94480 27259
99803 16434



SPANDANA
Constructions

IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3

CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–



ಶ್ರೀ ಕಾಂತಾವರ ಜಯಪ್ರಕಾಶ್

ಮತ್ತು ಶ್ರೀಲತಾ ಹಾಗೂ

ತನ್ವಿ, ನಿವೇದ, ಧೃತಿ ಮತ್ತು ಧ್ರುವ್



Prop. : SUDHAKAR BELLE
: 9845193103/ 9481563103

KARAN DIGITAL STUDIO

Sadasukh Building
Nr. Postoffice, Padubidri - 574 111

Opp. Busstand
Belman

All Marriage & Other functions
Photography & Videography Available

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

ರವಿಕಿರಣ್ ಕ್ರೈಲ, ಬಿ.ಎ., ಎಲ್‌ಎಲ್.ಬಿ.

ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)

2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ

ಪುತ್ತೂರು ತಾಲೂಕು, ದ. ಕ., 574 241

Phone : 0824 - 2440110, 2213946

VISHRAM MOTORS (P.) LTD.

No. 4, Kodialbail Church Building

K. S. Rao Road, MANGALORE - 575 003

*Authorised Dealers for :*

Vijai Super GP 150 &
Vikram 3 Wheelers (Petrol & Diesel)



# ಹದಿನೆಂಟು ಪುರಾಣಗಳ ವೈಶಿಷ್ಟ್ಯಗಳು

ಪುರಾಣ ಎಂದರೆ ಬಹಳ ಪ್ರಾಚೀನವಾದದ್ದು. ಪುರಾಣಗಳು ಹದಿನೆಂಟು, ಇವುಗಳು ನಮ್ಮ ಧರ್ಮ-ಸಂಸ್ಕೃತಿ-ಸಂಸ್ಕಾರ-ಆಚಾರಗಳು ಹಾಗೂ ಭಗವಂತನ ಮಹಿಮೆಗಳನ್ನು ಸಾರುವ ಭಕ್ತಿಯ ಜ್ಞಾನದ ಭಂಡಾರವಾಗಿವೆ. ಸೃಷ್ಟಿಕರ್ತರಾದ ಶ್ರೀ ಬ್ರಹ್ಮದೇವರ ಮುಖದಿಂದ ಪುರಾಣಗಳು ಬಂದವು. ನಂತರದಲ್ಲಿ ವೇದಗಳು ಸೃಷ್ಟಿಯಾದವು ಎನ್ನುವ ಮಹತ್ವದ ವಿಷಯ 'ಮತ್ಸ್ಯಪುರಾಣ'ದಲ್ಲಿ ಹೇಳಲ್ಪಟ್ಟಿದೆ.

1) **ಬ್ರಹ್ಮಪುರಾಣ :** ಇದರಲ್ಲಿ ಹನ್ನೆರಡು ಸಾವಿರ ಶ್ಲೋಕಗಳು ಇದ್ದು, 245 ಅಧ್ಯಾಯ ಗಳೊಂದಿಗೆ, ಜಗದೊಡೆಯನಾದ ಶ್ರೀ ವಿಷ್ಣುವಿನ ಮಹಿಮೆಗಳನ್ನು ವಿಶೇಷವಾಗಿ ವರ್ಣಿಸಲಾಗಿರುವ ಪುರಾಣ.

2) **ಪದ್ಮಪುರಾಣ :** ಈ ಪುರಾಣ ಬಹಳ ಮಹತ್ವವುಳ್ಳದ್ದಾಗಿದೆ. ಇದರಲ್ಲಿ ಸೃಷ್ಟಿ ಖಂಡ-ಭೂಮಿಖಂಡ-ಪಾತಾಲಖಂಡ-ಉತ್ತರಖಂಡ ಎಂಬ ನಾಲ್ಕು ಮಹತ್ತರದ ಖಂಡಗಳು ಒಳಗೊಂಡಿದೆ. ಈ ಪುರಾಣ 55 ಸಾವಿರ ಬೃಹತ್ ಸ್ತೋತ್ರಗಳು ಇದ್ದು, ಶ್ರೀ ವಿಷ್ಣುವಿನ ಪರವಾದ ಪುರಾಣ ಇದಾಗಿದೆ.

3) **ವಿಷ್ಣುಪುರಾಣ :** ಈ ಪುರಾಣ ಹೆಸರೇ ಹೇಳುವಂತೆ, ಶ್ರೀ ಮಹಾವಿಷ್ಣುವಿನ ಸರ್ವೋತ್ಕೃಷ್ಟತೆಯನ್ನು ಎತ್ತಿ ತೋರಿಸುವ ಪುರಾಣ, 13 ಸಾವಿರ ಶ್ಲೋಕಗಳನ್ನು ಹೊಂದಿದೆ.

4) **ಶಿವಪುರಾಣ :** ಈ ಪುರಾಣ ಮಹೇಶ್ವರನ ಮಹಿಮೆಯನ್ನು ಸವಿಸ್ತಾರವಾಗಿ ವರ್ಣಿಸಿ, ಅನೇಕ ತತ್ವಗಳನ್ನು, ಶತರುದ್ರದ ಮಂತ್ರಾರ್ಥಗಳನ್ನು ವಿವರಿಸಿ, 24 ಸಾವಿರ ಶ್ಲೋಕಗಳನ್ನು ಒಳಗೊಂಡಿದೆ. ಪರಶಿವನ ಪರವಾದ ಪುರಾಣ.

5) **ಭಾಗವತಪುರಾಣ :** ಇದರಲ್ಲಿ ಹರಿಯೇ ಸರ್ವೋತ್ತಮನೆಂಬ ತತ್ವವನ್ನು ಪ್ರತಿಪಾದಿಸಿದ್ದು, ವೇದಾಂತದ ವಿಷಯ, ಶ್ರೀ ಮಹಾವಿಷ್ಣುವಿನ ದಶಾವತಾರಗಳ ಮಹಿಮೆ ಬಹು ಮುಖ್ಯವಾಗಿ ವೇದಮಾತೆಯಾದ ಗಾಯತ್ರೀಮಂತ್ರದ ಮಹಿಮೆ, ಶ್ರೀಕೃಷ್ಣಾವತಾರದ ಮಹಿಮೆಯೊಂದಿಗೆ, 18 ಸಾವಿರ ಶ್ಲೋಕಗಳು ಇರುವ ವಿಶಿಷ್ಟವಾದ ಪುರಾಣ ಇದು. ಈ ಭಾಗವತ ಪುರಾಣವನ್ನು 'ಪುರಾಣರತ್ನ' ಎನ್ನಲಾಗಿದೆ.

6) **ನಾರಾದೀಯಪುರಾಣ :** ಹದಿನೆಂಟು ಪುರಾಣಗಳಲ್ಲಿ ಬರುವ ಎಲ್ಲಾ ಮಹತ್ವದ ಪುರಾಣಗಳನ್ನು ಸೂಕ್ಷ್ಮವಾಗಿ ಈ ಪುರಾಣದಲ್ಲಿ ವರ್ಣಿಸಲಾಗಿದೆ. 24 ಸಾವಿರ ಶ್ಲೋಕಗಳು ಇದ್ದು, ಶ್ರೀ ಮಹಾವಿಷ್ಣುವಿನ ಮಹಿಮೆಯನ್ನು ಸಾರುವ ಪುರಾಣ ಇದಾಗಿದೆ.

7) **ಮಾರ್ಕಾಂಡೇಯಪುರಾಣ :** 9 ಸಾವಿರ ಶ್ಲೋಕಗಳು, 14 ಮನ್ವಂತರಗಳ ಕಥೆಯೊಂದಿಗೆ, ಜಗತ್ತಿನಲ್ಲಿ ಸರ್ವಶ್ರೇಷ್ಠವಾದ 'ಶ್ರೀ ದೇವಿಮಹಾತ್ಮೆ' ಈ ಪುರಾಣದಲ್ಲಿದ್ದು, ಜಗನ್ಮಾತೆ ದೇವಿಯ ಮಹಿಮೆ ಸಾರುವ, ಶ್ರೀದೇವಿಯ ಪರವಾದ ಪುರಾಣ ಇದು.

8) **ಅಗ್ನಿಪುರಾಣ :** ಹದಿನೈದು ಸಾವಿರದ ನೂರು (15,100) ಶ್ಲೋಕಗಳು, ಬಹುಮುಖ್ಯವಾಗಿ, ವ್ಯಾಕರಣ-ವೈದ್ಯಶಾಸ್ತ್ರ-ಜ್ಯೋತಿಷ್ಯಶಾಸ್ತ್ರ-ಧನುರ್ವೇದಶಾಸ್ತ್ರ-ಶಿಲ್ಪಕಲಾ-ಸಾಹಿತ್ಯ-ಗಾಂಧರ್ವವೇದ-ದರ್ಶನ ಹೀಗೆ ವಿದ್ಯೆಗಳಿಗಾಗಿಯೇ ಇರುವ ಮಹಾ ವಿಶೇಷವಾದ ಪುರಾಣ ಇದಾಗಿದೆ.

9) **ಭವಿಷ್ಯಪುರಾಣ :** 14,000 ಶ್ಲೋಕಗಳಿಂದ ಕಲಿಯುಗದ ಮಹಿಮೆಗಳನ್ನು ಸವಿಸ್ತಾರವಾಗಿ ವಿವರಿಸಿ, ಆಚಾರ-ವಿಚಾರ-ನಡೆ-ನುಡಿ-ಜೀವನಶೈಲಿ-ಭಾರತೀಯ ಸಂಸ್ಕೃತಿ ಬಿಟ್ಟು, ಪಾಶ್ಚಿಮಾತ್ಯ ಸಂಸ್ಕೃತಿ ಕಡೆಗೆ ವಾಲುವುದು, ವಿದೇಶಿಯರು ನಮ್ಮನ್ನು ಆಳುವುದು, ಇಂತಹ ಕೆಟ್ಟ ನಡವಳಿಕೆಯಿಂದ, ಆಗುವ ದುಷ್ಪರಿಣಾಮಗಳನ್ನು ಎಳೆ-ಎಳೆಯಾಗಿ ವಿವರಿಸಿ, ಎಲ್ಲಾ ದೇವರ ಮಹಿಮೆಗಳನ್ನು ಎತ್ತಿ ಹಿಡಿದ ಪುರಾಣ ಇದು.

10) **ಬ್ರಹ್ಮವೈವರ್ತಪುರಾಣ :** 18 ಸಾವಿರ ಶ್ಲೋಕಗಳನ್ನು ಹೊಂದಿದ್ದು, ನಾರದ ಸಂವಾದ, ಬ್ರಹ್ಮ-ವರಾಹಸಂವಾದ, ಸಾವರ್ಣಿ-ಮನುಸಂವಾದಗಳಿಂದ ಪ್ರಪಂಚದ ಸೃಷ್ಟಿಯ ಬಗ್ಗೆ ವಿಶೇಷವಾಗಿ ವರ್ಣಿಸಲಾದ ಪುರಾಣ.

11) **ಲಿಂಗಪುರಾಣ :** ಪರಶಿವನಿಗೆ ಅತಿಪ್ರಿಯವಾದ ಪುರಾಣ ಇದು. 12 ಸಾವಿರ ಶ್ಲೋಕಗಳು. ಶಿವಲಿಂಗದ ಲಕ್ಷಣ, ಸದಾಶಿವನ ಮಹಿಮೆ ಹಾಗೂ ಶಿವನ ಮಹಾತ್ಮೆ-ಶತರುದ್ರೀಯ ಮಂತ್ರಗಳನ್ನು ಒಳಗೊಂಡ ಪುರಾಣ ಇದಾಗಿದೆ.

12) **ವರಾಹಪುರಾಣ :** 24 ಸಾವಿರ ಶ್ಲೋಕಗಳು, ಶ್ವೇತವರಾಹಕಲ್ಪದ ಕಥೆಗಳು, ಶ್ರೀ ಮಹಾವಿಷ್ಣುವಿನ ಅವತಾರಗಳ ಮಹಿಮೆ ವರ್ಣಿತವಾಗಿದೆ. ಶ್ರೀ ಮಹಾವಿಷ್ಣುಪರವಾದ ಪುರಾಣವಿದು.

13) **ಸ್ಕಂದಪುರಾಣ :** ಪುರಾಣಗಳಲ್ಲೇ ಬಹುದೊಡ್ಡ ಪುರಾಣ ಇದಾಗಿದೆ. 18 ಸಾವಿರ ಶ್ಲೋಕಗಳನ್ನು ಹೊಂದಿರುವ ಬೃಹತ್ ಪುರಾಣ ಇದು. ಭರತಭೂಮಿಯ ಸಮಸ್ತ ತೀರ್ಥಕ್ಷೇತ್ರಗಳ ಮಹಿಮೆಯ ವರ್ಣನೆ ಒಳಗೊಂಡಿದೆ. ಮಾನವರು ದೇವರ ಕುರಿತು, ಮಾಡಬೇಕಾದ ವ್ರತಗಳು ಹಾಗೂ ಪೂಜೆಗಳ ವಿವರ, ಶಿವನ ಪರವಾದ ಪುರಾಣ ಇದಾಗಿದ್ದು, ಮಹೇಶ್ವರನ ಮಹಿಮೆಯನ್ನು ಸಾರಿ ಹೇಳಲಾಗಿದೆ. ಈ ಪುರಾಣದಲ್ಲಿ ಧಾರ್ಮಿಕ ವಿಶೇಷತೆಗಳನ್ನು ವರ್ಣಿಸಲಾಗಿದೆ.

ಬ್ರಹ್ಮೋತ್ತರಖಂಡ ಎನ್ನುವ ಒಂದು ಭಾಗದಲ್ಲಿ ಪರಮಪವಿತ್ರವಾದ ಶ್ರೇಷ್ಠವಾದ 'ಶ್ರೀ ಸತ್ಯನಾರಾಯಣಸ್ವಾಮಿ'ಯ ವ್ರತದ ಬಗ್ಗೆ ತಿಳಿಸಲಾಗಿದೆ. ಭಗವಂತನ ಹಲವಾರು ಮಹಿಮೆಗಳನ್ನು ಈ ಸ್ಕಂದಪುರಾಣ ಎತ್ತಿಹಿಡಿದು ಜಗತ್ತಿಗೆ ತೋರಿಸಿದೆ.

14) **ವಾಮನಪುರಾಣ :** 10 ಸಾವಿರ ಶ್ಲೋಕಗಳನ್ನು ಒಳಗೊಂಡ ಶ್ರೀ ಮಹಾವಿಷ್ಣುವಿನ ಮಹತ್ವ, ವಾಮನ ಅವತಾರದಲ್ಲಿ ಬಲಿಚಕ್ರವರ್ತಿಯ ಚರಿತ್ರೆ ಇರುವ ಮಹಾವಿಷ್ಣು ಪರವಾದ ಪುರಾಣ ಇದಾಗಿದೆ.

15) **ಕೂರ್ಮಪುರಾಣ :** 17 ಸಾವಿರ ಶ್ಲೋಕಗಳಿಂದ ಕೂಡಿದ್ದು, ಹಲವು ತಂತ್ರಶಾಸ್ತ್ರಗಳ ಮಹತ್ವದ ವಿಷಯಗಳು, ಸಮುದ್ರಮಂಥನ, ಕೂರ್ಮಾವತಾರದ ಮಹಿಮೆಯನ್ನು ಪರಿಪೂರ್ಣವಾಗಿ ವರ್ಣಿಸಲಾಗಿದೆ. ಮಹಾವಿಷ್ಣುವಿನ ಪರವಾಗಿರುವ ಪುರಾಣ.

16) **ಮತ್ಸ್ಯಪುರಾಣ :** 14 ಸಾವಿರ ಶ್ಲೋಕಗಳು, ಮತ್ಸ್ಯರೂಪಿ ಶ್ರೀ ಮಹಾವಿಷ್ಣುವಿನ ಮಹಿಮೆ, ಶ್ರೀ ಮಹಾವಿಷ್ಣುವು ವೈವಸ್ವತಮನುವಿಗೆ ಉಪದೇಶಿಸಿದ ತತ್ವಬೋಧನೆ, ತಮಸಾಸುರನೆಂಬ ದೈತ್ಯ ವೇದಗಳನ್ನು ಕದ್ದು ಹೋದ ಕಾರಣ ಶ್ರೀ ಮಹಾವಿಷ್ಣು 'ಮತ್ಸ್ಯಾವತಾರ' ತಾಳಿ, ಆ ಅಸುರನನ್ನು ವಧಿಸಿ, ವೇದಗಳನ್ನು ರಕ್ಷಿಸಿ, ಉದ್ಧರಿಸಿದ್ದು ಈ ಪುರಾಣದಲ್ಲಿ ತಿಳಿಸಲಾಗಿದೆ.

17) **ಗರುಡಪುರಾಣ :** ಹದಿನೆಂಟು ಪುರಾಣಗಳಲ್ಲಿಯೇ ಬಹಳ ವಿಶಿಷ್ಟ ಪುರಾಣ ಇದು. 19 ಸಾವಿರ ಶ್ಲೋಕಗಳನ್ನು ಹೊಂದಿದೆ. ಈ ಪುರಾಣದಲ್ಲಿ 'ಪ್ರೇತಖಂಡ' ಎಂಬ ಭಾಗದಲ್ಲಿ ಮೃತಪಟ್ಟ ಮನುಜನಿಗೆ ಆಗುವ ಸ್ಥಿತಿ ಬಗ್ಗೆ, ಸತ್ತಕೂಡಲೇ ಸಿಗುವ ಪ್ರೇತ ದೇಹದ ಬಗ್ಗೆ ವಿವರಣೆ, ಪ್ರಾಣೋತ್ಕ್ರಮಣಕಾಲದ ಯಾತನೆ, ಯಮಲೋಕದ ದಾರಿಯಲ್ಲಿ ಆತ ಅನುಭವಿಸುವ ವಿವರ, ಪಾಪಿಗಳು ಯಮಲೋಕದಲ್ಲಿ ಅನುಭವಿಸುವ 'ನರಕಯಾತನೆ' ಆತನಿಗೆ ನೀಡುವ ಶಿಕ್ಷೆಗಳ ವಿವರ, ಮೃತಪಟ್ಟವರಿಗೆ ಮಾಡಬೇಕಾದ ಔರ್ಧ್ವದೈಹಿಕಕ್ರಿಯೆ'ಗಳ ವಿವರಣೆ, ಭೂಲೋಕದಲ್ಲಿ ಮಾಡಿದ ಶ್ರಾದ್ಧದ ಫಲಗಳು, ಮೃತಪಟ್ಟವರು 'ಪಿತೃಲೋಕ' ಸೇರುವ ಬಗ್ಗೆ, ಎಲ್ಲಾ ವಿವರಣೆ ಹೊಂದಿರುವ ಶ್ರೀ ಮಹಾವಿಷ್ಣುವಿನ ಪರವಾದ ಬಹಳ ವೈಶಿಷ್ಟ್ಯವನ್ನು ಹೊಂದಿರುವ ಪುರಾಣವಾಗಿದೆ.

18) **ಬ್ರಹ್ಮಾಂಡಪುರಾಣ :** 12 ಸಾವಿರ ಶ್ಲೋಕಗಳನ್ನು ಹೊಂದಿರುವ ಬ್ರಹ್ಮದೇವರ ಪರವಾಗಿರುವ ಪುರಾಣ ಇದಾಗಿದೆ. ಇದರಲ್ಲಿ ಆಧ್ಯಾತ್ಮರಾಮಾಯಣ-ಲಲಿತೋಪಾಖ್ಯಾನ ಮುಂತಾದ ವಿಶೇಷತೆಯುಳ್ಳಂತಹ ಧರ್ಮಕ್ಕೆ ಸಂಬಂಧಿಸಿದಂತೆ ಇರುವ ಪುರಾಣ ಇದು.

ಇಂತಹ ಶ್ರೇಷ್ಠವಾದ ಈ ಹದಿನೆಂಟು ಪುರಾಣಗಳ ಅಧ್ಯಯನ ಮಾಡುವುದರ ಮೂಲಕ, ನಮ್ಮ ಧಾರ್ಮಿಕತೆಯ ಮಹತ್ವ ಇನ್ನೂ ಹೆಚ್ಚು ಹೆಚ್ಚು ಅರಿಯುವಂತಾಗುತ್ತದೆ. ನಮ್ಮಲ್ಲಿರುವ ಶ್ರೇಷ್ಠಗ್ರಂಥಗಳಾದ, ರಾಮಾಯಣ-ಮಹಾಭಾರತ, ಭಾಗವತ-ಭಗವದ್ಗೀತೆಯನ್ನು ನಿತ್ಯವೂ ಓದಿ, ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬಹುದು. ಎಂತಹ ಅದ್ಭುತ ಆಚಾರ-ವಿಚಾರ-ಸಂಪ್ರದಾಯ-ಪದ್ಧತಿ-ಆಚರಣೆಗಳನ್ನು ಹೊಂದಿರುವ, 'ತಪೋಭೂಮಿ' ನಮ್ಮ ಭಾರತ. ಇಂತಹ ಪರಮ ಪಾವನವಾದ 'ಭರತಭೂಮಿ'ಯಲ್ಲಿ ಏಳೇಳುಜನುಮದ ಸುಕೃತ ಫಲದಿಂದ, ನಾವಿಲ್ಲಿ ಜನಿಸಿದ್ದೇವೆ.

ಇಲ್ಲಿ ಹಲವು ಜಾತಿಗಳು, ಹಲವು ಭಾಷೆಗಳು, ಹಲವು ಧರ್ಮಗಳಿದ್ದರೂ, ವಿವಿಧತೆಯಲ್ಲಿ ಏಕತೆ ಹೊಂದಿರುವ ನಮ್ಮ ದೇಶ ಭಾರತ ಎಂದು ಭಾರತೀಯರಾದ ನಾವು ಹೆಮ್ಮೆಯಿಂದ ಹೇಳಿಕೊಳ್ಳೋಣ. *'ಲೋಕಾಃ ಸಮಸ್ತಾಃ ಸುಖಿನೋ ಭವಂತು'*

**ಶ್ರೀ ವೈ. ಎನ್. ವೆಂಕಟೇಶಮೂರ್ತಿ ಭಟ್ಟರು**

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಅದ್ಯಪಾಡಿ ಶ್ರೀ ಶಂಕರ ರಾವ್ (65) ತಾ. 19-11-2022ನೇ ಶನಿವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಅವರು ತಾಯಿ, ಪತ್ನಿ, ಮಗಳು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

* * *



ಬೈರಿಕಟ್ಟೆ ಶ್ರೀ ಶಿವರಾಮ್ ರಾವ್‌ರವರ ಪುತ್ರಿ ಹಾಗೂ ಶ್ರೀ ದೀಕ್ಷಿತ್‌ರವರ ಪತ್ನಿ ಡಾ. ಶ್ವೇತಾ ರಾವ್ (28) ತಾ. 19-11-2022ನೇ ಶನಿವಾರ ನಿಧನ ಹೊಂದಿದರು. ಅವರು ತಂದೆ, ತಾಯಿ, ಪತಿ ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

* * *



ಪಿಲಿಂಜೆ ದಿ| ಪಿ. ಲಕ್ಷ್ಮೀನಾರಾಯಣ ರಾವ್‌ರವರ ಧರ್ಮಪತ್ನಿ ಶ್ರೀಮತಿ ಕುಮುದಿನಿ ರಾವ್ (87) ತಾ. 16-11-2022ನೇ ಬುಧವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಅವರು ಮಗ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.


*Prop. : P. Srikanth Rao* Mobile : 9343361618

**M/s. SAMARPAN**

**HOUSE OF STATIONERY**

**"Vijaya Nivas", Opp. Pio Mall**
**Bejai Church Road, Mangalore - 4**





# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ

ಕುಡುಪು ಶ್ರೀ ನಾಗರಾಜ್ ರಾವ್ ತಮ್ಮ ಮಾತಾಪಿತರಾದ ಕುಡುಪು ಸುಬ್ಬ ರಾವ್ ಮತ್ತು ಶ್ರೀಮತಿ ಗಿರಿಜಮ್ಮ ಸ್ಮರಣಾರ್ಥ ಈ ಹಿಂದೆ ರೂ. **15,000/-** ನೀಡಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪಿಸಿದ್ದು, ಇದೀಗ ತಮ್ಮ ಪತ್ನಿ ಶ್ರೀಮತಿ ಶಕುಂತಲಾ ಜತೆಗೂಡಿ ರೂ. **35,000/-** ನೀಡಿ ನಿಧಿಯನ್ನು ರೂ. **50,000/-** ವರೆಗೆ ಹೆಚ್ಚಿಸಿದ್ದಾರೆ. ಇನ್ನು ಮುಂದೆ ಇನ್ನಷ್ಟು ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.





3,4,5 & 6 BHK Luxury homes at the heart of Mangalore

**Live the vacation life!**

Bookings open now

**8882 777 444**

SHIVABAGH
KADRI

Land® Trades
BUILDERS & DEVELOPERS
BUILDING TRUST,DELIVERING VALUE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*